ANANTHKUMAR PRATISHTHANA

# ಅನಂತಪಥ

ಪುಟ 8
ವ್ಯಕ್ತಿ ವಿಶೇಷ ಮಾಲಿಕೆ
ಭೂಸೇನೆಯ ಆತ್ಮ- ಜನರಲ್ ತಿಮ್ಮಯ್ಯ



ಸಂಪುಟ - 5 ಮೇ - 2025 ಸಂಚಿಕೆ - 59

## ಆ ದಿಟ್ಟ ನಿರ್ಧಾರಗಳೇ ಇತಿಹಾಸವನ್ನು ಸೃಷ್ಟಿಸಿದವು!



ನಾಯಕನಾದವನು ಭವಿಷ್ಯವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ವರ್ತಮಾನವನ್ನು ಭದ್ರವಾಗಿ ಕಟ್ಟಿಕೊಡಬೇಕಾಗುತ್ತದೆ. ಆದರೆ, ಇಂಥ ದಿಟ್ಟ ನಿರ್ಧಾರಗಳು, ದೃಢ ಹೆಜ್ಜೆಗಳು ಇರಿಸುವುದು ಸಾಮಾನ್ಯವಲ್ಲ. ಇಂಥ ನಾಯಕತ್ವ ಹೊಂದಿದ ನೇತಾರರೇ ಐತಿಹಾಸಿಕ ಎನಿಸುವಂಥ ನಿರ್ಧಾರಗಳನ್ನು ಕೈಗೊಂಡರು. ಇಂಥ ನಾಯಕರ ಸಾಲಿನಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿ, ಶ್ರೀ ಮನೋಹರ್ ಪರಿಕರ್ ಮತ್ತು ಶ್ರೀ ಅನಂತ್ ಕುಮಾರ್ ಅವರಂತಹ ಕೆಲವೇ ವ್ಯಕ್ತಿಗಳು ತಮ್ಮ ವಿಶಿಷ್ಟ ಕೊಡುಗೆಗಳಿಗಾಗಿ ಚಿರಸ್ಥಾಯಿಯಾಗಿ ನೆನಪಿನಲ್ಲಿ ಉಳಿಯುತ್ತಾರೆ.

ಇತ್ತೀಚೆಗೆ (ಏಪ್ರಿಲ್ ೨೨) ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಪಾಕಿಸ್ತಾನ ಪ್ರಾಯೋಜಿತ ಭೀಕರ ಭಯೋತ್ಪಾದಕ ದಾಳಿಯಿಂದ ಇಡೀ ದೇಶ ಆಘಾತ ಅನುಭವಿಸಿತು. ಇದಕ್ಕೆ ಪ್ರತ್ಯುತ್ತರವಾಗಿ ಭಾರತ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ಮೂಲಕ ತೋರಿದ ದಿಟ್ಟತನ, ಸಾಹಸ, ಭಯೋತ್ಪಾದಕ ನೆಲೆಗಳ ಮೇಲೆ ನಡೆಸಿದ ಕ್ಷಿಪ್ರ ಕಾರ್ಯಾಚರಣೆ ದೇಶದಲ್ಲಿ ಪ್ರಶಂಸೆಗೆ ಒಳಗಾಗಿದ್ದು ಸ್ವಾಭಾವಿಕ. ಆದರೆ, ಭಾರತದ ರಕ್ಷಣಾ ವ್ಯವಸ್ಥೆಯ ಸನ್ನದ್ಧತೆ, ಆಧುನಿಕ ತಂತ್ರಜ್ಞಾನ, ನಿಖರ ದಾಳಿಗಳನ್ನು ಕಂಡು ವಿಶ್ವದ ಬಹುತೇಕ ದೇಶಗಳು ನಿಬ್ಬೆರಗಾದರೆ, ಕೆಲ ದೇಶಗಳು ಅಸೂಯೆ ಪಟ್ಟುಕೊಂಡಿದ್ದೂ ಉಂಟು.

ಇದೆಲ್ಲ ಘಟನೆಗಳ ಹಿನ್ನೆಲೆಯಲ್ಲಿ ನಮಗೆಲ್ಲ ನೆನಪಾಗಬೇಕಾದ್ದು ಬೆಂಗಳೂರಿನಲ್ಲಿ ನಡೆದಿದ್ದ ಕಾಶ್ಮೀರ ಭವನದ ಉದ್ಘಾಟನೆ ಮತ್ತು ಮುಖ್ಯವಾಗಿ ಆಗಿನ ಕೇಂದ್ರ ಸಚಿವ ಅನಂತಕುಮಾರ್ ಅವರು ಜಮ್ಮು-ಕಾಶ್ಮೀರದ ಬಗ್ಗೆ ಹೊಂದಿದ್ದ ಅಸಾಧಾರಣ ಕಳಕಳಿ ಹಾಗೂ ದೂರದೃಷ್ಟಿ. ಅದು ೨೦೦೭ರ ಕಾಲಘಟ್ಟ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿ. ಬೆಂಗಳೂರಿನ ಜಯನಗರದಲ್ಲಿ ಕಾಶ್ಮೀರ ಭವನದ ಉದ್ಘಾಟನೆಯಾಯಿತು. ವೇದಿಕೆಯಲ್ಲಿ ಎಸ್.ಎಂ.ಕೃಷ್ಣ, ಅನಂತಕುಮಾರ್ ಇದ್ದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಈ ಭವನಕ್ಕೆ ಜಾಗ ಒದಗಿಸುವುದು ಸೇರಿದಂತೆ ಅನೇಕ ಬಗೆಯ ನೆರವನ್ನು ಅನಂತಕುಮಾರ್ ಒದಗಿಸಿದ್ದರು. ಹಾಗಾಗಿ, ಅದೊಂದು ಭಾವಪೂರ್ಣ ಸಮಾರಂಭವೂ ಆಗಿತ್ತು. ಅಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಸಮ್ಮುಖದಲ್ಲಿ ಅನಂತಕುಮಾರ್ ಆಡಿದ ಮಾತುಗಳು ಬಹುಮುಖ್ಯವಾಗಿದ್ದವು ಮತ್ತು ಆ ಮಾತುಗಳು ಕಾಶ್ಮೀರದ ಬಗೆಗಿನ ಅವರ ಆಶಯವನ್ನೂ ಅನಾವರಣಗೊಳಿಸಿತು.

ಅಂದು ಅವರು ಮಾತನಾಡುತ, 'ತುಂಬ ಜನರು ನಿಮ್ಮ ಜೀವನದ ಆಸೆ ಏನು ಎಂದು ಪ್ರಶ್ನಿಸುತ್ತಿರುತ್ತಾರೆ. ಆ ರಹಸ್ಯವನ್ನು ಎಂದಿಗೂ ಬಿಟ್ಟುಕೊಟ್ಟಿರಲಿಲ್ಲ. ಆದರೆ, ಇಂದು ಅದನ್ನು ಬಹಿರಂಗ ಪಡಿಸುತ್ತಿದ್ದೇನೆ. ಗಿಲ್ಗಿಟ್ ಪ್ರದೇಶದಲ್ಲಿ ಒಂದು ಹುಣ್ಣಿಮೆಯ ರಾತ್ರಿ ಮರದ ಕೆಳಗಡೆ ನೆಮ್ಮದಿಯಿಂದ ಕುಳಿತು ಪತ್ನಿಯೊಡನೆ ತಂಪು ಪಾನೀಯ ಸೇವಿಸಬೇಕು ಎಂಬುದು ನನ್ನ ಆಸೆ' ಎಂದರು. ತಕ್ಷಣವೇ ಕೃಷ್ಣ ಅವರು 'ನಮ್ಮನ್ನು ಕರೆಯುವುದಿಲ್ಲವೇ?' ಎಂದು ಕೇಳಿದಾಗ, 'ಖಂಡಿತ, ಎಲ್ಲರೂ ಒಟ್ಟಾಗಿ ಗಿಲ್ಗಿಟ್‌ಗೆ ಹೋಗೋಣ' ಎಂದರು. ಈ ಮಾತುಗಳ ಅರ್ಥ ಮತ್ತು ಆಶಯ ತುಂಬ ಸ್ಪಷ್ಟವಾದದ್ದು, ಜಮ್ಮು-ಕಾಶ್ಮೀರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಶಾಂತಿ ಶಾಶ್ವತವಾಗಿ ನೆಲೆಸಬೇಕು, ಜನರು ನೆಮ್ಮದಿಯ ಜೀವನ ಸಾಗಿಸುವಂತಾಗಬೇಕು. ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ), ಗಿಲ್ಗಿಟ್ ಭಾರತದ ಭಾಗವಾಗಬೇಕು ಎಂಬುದು ಅವರ ಜೀವನದ ಕನಸಾಗಿತ್ತು.

ಪುಟ 4 ರಲ್ಲಿ ಮುಂದುವರಿದಿದೆ

## ಹುಬ್ಬಳ್ಳಿಯಲ್ಲಿ ಯಶಸ್ವಿ ಅನಂತೋತ್ಸವ:

ಯುವ ಪೀಳಿಗೆಗೆ ಶ್ರೀ ಅನಂತಕುಮಾರ್ ಅವರ ವ್ಯಕ್ತಿತ್ವ ಮತ್ತು ಆದರ್ಶಗಳನ್ನು ಪರಿಚಯಿಸುವ ಮಹತ್ವಾಕಾಂಕ್ಷಿ ಪ್ರಯತ್ನವಾಗಿ ಹುಬ್ಬಳ್ಳಿಯ ವಿಜಯನಗರದಲ್ಲಿ ಸ್ಥಾಪಿತವಾದ "ಅನಂತ ಪ್ರೇರಣಾ ಕೇಂದ್ರ"ದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 27-03-2025ರಂದು "ಅನಂತ ಉತ್ಸವ" ಕಾರ್ಯಕ್ರಮವನ್ನು ಹುಬ್ಬಳ್ಳಿಯ ಕೆಂಪಣ್ಣನವರ ಕಲ್ಯಾಣಮಂಟಪದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಅನಂತಕುಮಾರ್ ಅವರ ಆತ್ಮೀಯರಾದ ಶ್ರೀ ಚಂದ್ರಕಾಂತ್ ಶುಕ್ಲ ಅವರು ಉದ್ಘಾಟನಾ ಕಾರ್ಯಕ್ರಮವನ್ನು ನೇರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಚಂದ್ರಕಾಂತ್ ಶುಕ್ಲ ಅವರು ಮನುಷ್ಯನ ಜೀವನದ ಆಯುಷ್ಯ 60, 70, 80, 90 ಅಥವಾ ಅದಕ್ಕಿಂತ ಹೆಚ್ಚಿರಬಹುದು. ಆದರೆ, ಆಯುಷ್ಯದ ಸೀಮಿತ ಅವಧಿಯಲ್ಲಿ ನಾವು ಏನು ಮಾಡುತ್ತೇವೆ ಎಂಬುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಶ್ರೀ ಅನಂತಕುಮಾರ್ ಅವರು ನಿಜಕ್ಕೂ ಒಂದು ಒಳ್ಳೆಯ ಉದಾಹರಣೆ.

ಅನಂತಕುಮಾರರ ಹೆಸರೇ ಅನಂತವಾಗಿದೆ. ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದರೂ, ಅವರು ದೇಶ ಮತ್ತು ರಾಜ್ಯದ ದೊಡ್ಡ ದೊಡ್ಡ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ ರೀತಿ ಅನನ್ಯವಾದದ್ದು. ಅವರ ಕಾರ್ಯಕ್ಷಮತೆ, ದಕ್ಷತೆ ಮತ್ತು ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವ ಗುಣ ನಿಜಕ್ಕೂ ಅನುಕರಣೀಯ. ಇಂದು ನಾವೆಲ್ಲರೂ ರಾಷ್ಟ್ರ ಭಾವನೆಯನ್ನು ಜಾಗೃತಗೊಳಿಸಬೇಕಾದ ಮತ್ತು ಬಲಪಡಿಸಬೇಕಾದ ಅವಶ್ಯಕತೆ ಇದೆ. ಅನಂತಕುಮಾರ್ ಅವರಂತೆ "ದೇಶ ಮೊದಲು" ಎಂಬ ಉದಾತ್ತ ಭಾವನೆಯನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.




ವೇದಿಕೆಯಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸರ್ವಶ್ರೀ ವಿಷ್ಣುಕಾಂತ್ ಚಟಪಲ್ಲಿ, ಹನುಮಂತಪ್ಪ, ನಂದಕುಮಾರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಅನೇಕ ಗಣ್ಯರು, ಸಂಘಟನೆಗಳ ಪ್ರತಿನಿಧಿಗಳು ಮತ್ತು ಅನಂತಕುಮಾರ್ ಅವರ ಹಿತೈಷಿಗಳು ಭಾಗವಹಿಸಿ, ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಅನಂತಕುಮಾರ್ ಅವರ ಆತ್ಮೀಯರು ತಮ್ಮ ಬಳಿಯಿದ್ದ ಹಳೆಯ ಚಿತ್ರಗಳು, ವಿಶೇಷ ಲೇಖನಗಳು ಮತ್ತು ಸ್ಮೃತಿಗಳನ್ನು ಕೇಂದ್ರಕ್ಕೆ ನೀಡುವುದರ ಮೂಲಕ ಕಾರ್ಯಕ್ರಮದ ವೈಭವ ಹೆಚ್ಚಿಸಿದರು.

ಪುಟ 6 ರಲ್ಲಿ ಮುಂದುವರಿದಿದೆ

# ಸಿಂಧೂ ದರ್ಶನ ಉತ್ಸವ



ಭಾರತವು ನದಿಗಳ ತವರೂರು. ಹಿಮಾಲಯದ ಗಿರಿಶಿಖರಗಳಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಹರಿಯುವ ನದಿಗಳು ಈ ನಾಡಿನ ಜೀವನಾಡಿಗಳಾಗಿವೆ. ಇವು ಕೇವಲ ಜಲಮೂಲಗಳಲ್ಲ, ನಮ್ಮ ಸಂಸ್ಕೃತಿಯನ್ನು ಪೋಷಿಸಿದ ತಾಯಿ ಸ್ವರೂಪದವು. ನಮ್ಮ ದೈನಂದಿನ ಪೂಜಾ ವಿಧಿವಿಧಾನಗಳಲ್ಲಿ ನದಿಗಳಿಗೆ ಮಹತ್ವದ ಸ್ಥಾನವಿದೆ. ಈ ಪವಿತ್ರ ನದಿಗಳ ಮಹತ್ವವನ್ನು ಅರಿತು, ರಾಷ್ಟ್ರೀಯ ಏಕತೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಸಾರುವ ಉದ್ದೇಶದಿಂದ ಲಾಲ್ ಕೃಷ್ಣ ಅದ್ವಾನಿಯವರು 1996 ರಲ್ಲಿ ಸಿಂಧೂ ದರ್ಶನ ಅಭಿಯಾನವನ್ನು ಪ್ರಾರಂಭಿಸಿದರು.

ತಮ್ಮ ಗುರು ಶ್ರೀ ಲಾಲ್ ಕೃಷ್ಣ ಅದ್ವಾನಿಯವರು 1996 ರಲ್ಲಿ ಪ್ರಾರಂಭಿಸಿದ ಸಿಂಧೂ ದರ್ಶನ ಅಭಿಯಾನವನ್ನು ಅನಂತಕುಮಾರರು ಸಿಂಧೂ ದರ್ಶನ ಉತ್ಸವವನ್ನಾಗಿ ಪರಿವರ್ತಿಸಿದರು. ಅವರ ದೂರದೃಷ್ಟಿ ಮತ್ತು ಸಂಘಟನಾ ಕೌಶಲ್ಯದಿಂದಾಗಿ, ಸಿಂಧೂ ದರ್ಶನ ಕೇವಲ ಒಂದು ಕಾರ್ಯಕ್ರಮವಾಗಿ ಉಳಿಯದೆ, ಭಾರತದ ಪ್ರಾಚೀನ ನಾಗರಿಕತೆ ಮತ್ತು ಸಂಸ್ಕೃತಿಯ ಪ್ರತೀಕವಾಗಿ ಬೆಳೆಯಿತು. 1999ರ ಜುಲೈ 28ರಂದು ಅಂಚೆಚೀಟಿ ಬಿಡುಗಡೆ ಮಾಡುವ ಮೂಲಕ ಈ ಉತ್ಸವಕ್ಕೆ ರಾಷ್ಟ್ರೀಯ ಮಾನ್ಯತೆ ದೊರೆಯಿತು. ಸಿಂಧೂ ನದಿಯ ಐತಿಹಾಸಿಕ ಮಹತ್ವವನ್ನು ಜಗತ್ತಿಗೆ ಸಾರುವುದು, ಭಾರತದ ಭವ್ಯವಾದ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರದರ್ಶಿಸುವುದು ಮತ್ತು ದೇಶದಾದ್ಯಂತ ಸಾಮರಸ್ಯದ ಭಾವನೆಯನ್ನು ಮೂಡಿಸುವುದು ಈ ಉತ್ಸವದ ಪ್ರಮುಖ ಉದ್ದೇಶಗಳಾಗಿದ್ದವು.

ಸಿಂಧೂ ದರ್ಶನ ಉತ್ಸವಕ್ಕಾಗಿ ಭೌಗೋಳಿಕವಾಗಿ ಅತ್ಯಂತ ಸುಂದರ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಲಡಾಖ್ ಪ್ರದೇಶವನ್ನು ಆಯ್ಕೆ ಮಾಡಿದ್ದು ಅತ್ಯಂತ ಸೂಕ್ತ ನಿರ್ಧಾರವಾಗಿತ್ತು.

ಹಿಮಾಲಯದ ಮಡಿಲಲ್ಲಿರುವ ಲಡಾಖ್, ತನ್ನ ವಿಶಿಷ್ಟ ಭೂಪ್ರದೇಶ, ಪ್ರಾಚೀನ ಬೌದ್ಧ ಸಂಸ್ಕೃತಿ ಮತ್ತು ಸಿಂಧೂ ನದಿಯ ಉಗಮ ಸ್ಥಾನಕ್ಕೆ ಸಮೀಪವಿರುವ ಕಾರಣದಿಂದ ಈ ಉತ್ಸವಕ್ಕೆ ಒಂದು ವಿಶೇಷ ಮೆರಗು ನೀಡಿತು. ಲೇಹ್ ಪಟ್ಟಣದಲ್ಲಿ ನಡೆಯುತ್ತಿರುವ ಈ ಉತ್ಸವವು ಇಡೀ ಪ್ರದೇಶದ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಹೊಸ ಉತ್ತೇಜನ ನೀಡಿತು. ದೇಶದ ವಿವಿಧ ಭಾಗಗಳಿಂದ ಜನರು ಲಡಾಖ್‌ಗೆ ಭೇಟಿ ನೀಡಲು ಪ್ರಾರಂಭಿಸಿದ್ದರಿಂದ, ಅಲ್ಲಿನ ಸ್ಥಳೀಯ ಸಂಸ್ಕೃತಿ ಮತ್ತು ಆರ್ಥಿಕತೆಗೆ ಒಂದು ಹೊಸ ಚೈತನ್ಯ ದೊರೆಯಿತು.

ಉತ್ಸವದ ಯಶಸ್ಸಿಗೆ ಪೂರಕವಾಗಿ, ಲೇಹ್ ಪಟ್ಟಣದಿಂದ ಕೇವಲ 15 ಕಿಲೋಮೀಟರ್ ದೂರದಲ್ಲಿರುವ ಶೇ ಎಂಬ ಪ್ರದೇಶದಲ್ಲಿ ಸಿಂಧೂ ಸಂಸ್ಕೃತಿಕ ಕೇಂದ್ರದ ಕಟ್ಟಡಕ್ಕೆ ಅಂದಿನ ಪ್ರಧಾನಮಂತ್ರಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಶಿಲಾನ್ಯಾಸ ನೆರವೇರಿಸಿದರು. ಈ ಕೇಂದ್ರವು ಸಿಂಧೂ ನದಿಯ ಇತಿಹಾಸ ಮತ್ತು ಮಹತ್ವವನ್ನು ಸಂರಕ್ಷಿಸುವ ಮತ್ತು ಪ್ರಚಾರ ಮಾಡುವ ಉದ್ದೇಶವನ್ನು ಹೊಂದಿತ್ತು. ಲಡಾಖ್ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಜಗತ್ತಿನ ಅತ್ಯಂತ ಎತ್ತರದ ವಿಮಾನ ನಿಲ್ದಾಣವನ್ನು ಉನ್ನತ ದರ್ಜೆಗೆ ಏರಿಸಲಾಯಿತು. ರಸ್ತೆಗಳು, ವಸತಿ ಸೌಕರ್ಯಗಳು ಮತ್ತು ಇತರ ಮೂಲ ಸೌಕರ್ಯಗಳನ್ನು ಉತ್ತಮಪಡಿಸುವ ಕಾರ್ಯವೂ ಭರದಿಂದ ಸಾಗಿತು. ಈ ಎಲ್ಲಾ ಪ್ರಯತ್ನಗಳ ಫಲವಾಗಿ, ಇಂದು ಲಡಾಖ್ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ. ಈ ಅಭಿವೃದ್ಧಿಯ ಹಿಂದಿನ ಪ್ರಮುಖ ಪ್ರೇರಕ ಶಕ್ತಿ ಅನಂತಕುಮಾರ್ ಅವರ ದೂರದೃಷ್ಟಿ ಮತ್ತು ಬದ್ಧತೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಸಿಂಧೂ ದರ್ಶನ ಉತ್ಸವವು ಮುಂದೆ ಬ್ರಹ್ಮಪುತ್ರ ನದಿ ದರ್ಶನ ಉತ್ಸವದ ಪ್ರಾರಂಭಕ್ಕೆ ಮಾದರಿಯಾಯಿತು.

ಭಾರತದ ಸಪ್ತ ಪವಿತ್ರ ನದಿಗಳಲ್ಲಿ ಸಿಂಧೂ ನದಿಗೂ ಮಹತ್ತರ ಸ್ಥಾನವಿದೆ. ಈ ನದಿಯ ಹೆಸರಿನಿಂದಲೇ 'ಸಿಂಧೂ ನಾಗರಿಕತೆ' ಎಂಬ ಪ್ರಾಚೀನ ನಾಗರಿಕತೆಯು ಪ್ರಸಿದ್ಧವಾಗಿದೆ. ಈ ನದಿಯ ಪವಿತ್ರತೆಯನ್ನು ಮತ್ತು ಸಾಂಸ್ಕೃತಿಕ ಮಹತ್ವವನ್ನು ಕಾಪಾಡುವ ಉದ್ದೇಶದಿಂದ ಅನಂತಕುಮಾರ್ ಅವರು ಆರಂಭಿಸಿದ 'ಸಿಂಧೂ ದರ್ಶನ' ಕಾರ್ಯಕ್ರಮವು ಅತ್ಯಂತ ಗಮನಾರ್ಹವಾಗಿದೆ. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದಾಗ, ಸಿಂಧೂ ನದಿಯ ಸಂರಕ್ಷಣೆಯ ಅಗತ್ಯತೆ ಮತ್ತು ಪ್ರಾಮುಖ್ಯತೆ ಇನ್ನಷ್ಟು ಹೆಚ್ಚಾಗಿ ಅರಿವಿಗೆ ಬರುತ್ತಿದೆ.





ಶ್ರದ್ಧೆಯ ಶಿಲ್ಪ: ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯ ಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್. ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಕರ್ನಾಟಕದ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ವಿಜಯಪುರ ಜಿಲ್ಲೆಯ ಬಾಗೇವಾಡಿಯ ಬಸವೇಶ್ವರ ದೇವಾಲಯ, ಹಾಸನ ಜಿಲ್ಲೆಯ ಅಗ್ರಹಾರ ಬೆಳಗುಲಿಯ ದೇವಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬನ್ನೇರುಘಟ್ಟದ ದೇವಾಲಯ, ಹಂಪೆಯ ವಿಜಯ ವಿಠಲ ದೇವಾಲಯವನ್ನು ಪರಿಚಯಿಸಲಾಯಿತು.









## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಸೆರೆಮನೆಯಲ್ಲಿ ಸ್ವಾಗತಗೀತೆ

### ಅಧ್ಯಾಯ-34

" ಯೋಧರೇ ಬಯಸಿ ಬನ್ನಿ, ಶುಭೋದಯಕೆ ಸ್ವಾಗತ
ರಾಷ್ಟ್ರದ ಆಕಾಶದಲ್ಲಿ ಸುಪ್ರಭಾತ ಸೂಚಿಸುತ"

ಅನಂತಕುಮಾರ ಮತ್ತವನ ಗೆಳೆಯರ ಬಳಗವು ಸೆರೆಮನೆಯೊಳಗೆ ಕಾಲಿರಿಸುತ್ತಿದ್ದಂತೆ ಈ ಹಾಡು ಸಮೂಹಗಾಯನದಲ್ಲಿ ಗಟ್ಟಿಯಾಗಿ ಕೇಳಿಬರತೊಡಗಿತು. ಈಗಾಗಲೇ ಸೆರೆಮನೆಯಲ್ಲಿದ್ದ ಸತ್ಯಾಗ್ರಹಿಗಳು ಹೊಸಬರನ್ನು ಬರಮಾಡಿಕೊಂಡದ್ದು ಹೀಗೆ.

ಹೊಸ ಗುಂಪಿನ ಎಲ್ಲ ಹುಡುಗರೂ ಊಟ ಮಾಡಿ ಲಕ್ಷಣವಾಗಿ ಡ್ರೆಸ್ ಮಾಡಿಕೊಂಡೇ ಜೈಲು ತಲುಪಿದ್ದರು. ಈಗಾಗಲೇ ಜೈಲಿನಲ್ಲಿದ್ದವರಿಗೆ ಹೊಸ ಗುಂಪಿನ ಸತ್ಯಾಗ್ರಹಿಗಳು ಅಂದು ಬರುವರೆಂಬ ನಿರೀಕ್ಷೆಯಿದ್ದಿತು. ಇರುಳು ಕವಿದು ಇವರೆಲ್ಲ ಜೈಲು ತಲುಪುತ್ತಿದ್ದಂತೆಯೇ ಈ ಮುನ್ನ ಬಂಧಿಗಳಾಗಿ ಒಳಗಿದ್ದವರಿಗೆಲ್ಲ ಸಂಭ್ರಮವೋ ಸಂಭ್ರಮ. ಊಟದ ತಟ್ಟೆ ಲೋಟಗಳನ್ನು ಢಣ ಢಣ ಬಡಿಯುತ್ತ ಉತ್ಸಾಹದಿಂದ ಸ್ವಾಗತಿಸಿದರು. ತಮಗೆ ಇಂಥ ಸಂಭ್ರಮದ ಸ್ವಾಗತ ಸಿಗುವುದನ್ನು ಈ ಹದಿನಾಲ್ಕು ಜನರೂ ನಿರೀಕ್ಷಿಸಿರಲಿಲ್ಲ.

ಚೆಂಡು ಪುಟಿಯಬೇಕಾದರೆ ಅದಕ್ಕೊಂದು ಗಟ್ಟಿ ನೆಲ ಸಿಗಬೇಕು. ನಾಯಕತ್ವ ಮೂಡಬೇಕಾದರೆ ಸಂಘರ್ಷದ ಸನ್ನಿವೇಶ ಎದುರಾಗಬೇಕು. ಅಂದಿನ ಸಂಘರ್ಷದ ವಾತಾವರಣ, ಹೋರಾಟದ ಸನ್ನಿವೇಶಗಳು ಎದುರಾದಂತೆಲ್ಲ ವ್ಯಕ್ತಿ ಗಟ್ಟಿಗೊಳ್ಳಲು ಸಾಧ್ಯ. ಅಂಥ ಅವಕಾಶಗಳು ಸಿಕ್ಕದೆ ಹೋದಾಗ ವ್ಯಕ್ತಿತ್ವದ ಕಸುವು ಪೂರ್ಣಪ್ರಮಾಣದಲ್ಲಿ ರೂಪುಗೊಳ್ಳುವುದಕ್ಕಾಗಲಿ, ನಾಯಕತ್ವದ ಲಕ್ಷಣಗಳು ಹೊಮ್ಮುವುದಕ್ಕಾಗಲಿ ಸಾಧ್ಯವಾಗಲಾರದು.

ಆ ಕ್ಷಣದವರೆಗೂ ಈ ಸತ್ಯಾಗ್ರಹಿಗಳಿಗಾದ ಅನುಭವ ವಿಶಿಷ್ಟವೇ ಆಗಿತ್ತು. ತಾವು ಹಿಡಿದ ದಾರಿ ಸುಗಮವಾದ ರಾಜಮಾರ್ಗವೇನೂ ಅಲ್ಲ. ತಮ್ಮ ಓದಿಗೆ, ವ್ಯಕ್ತಿಗತವಾದ ಅಂಶಗಳಿಗೆ ಇದರಿಂದ ಹಾನಿಯಾಗಬಹುದು, ಮನೆಯವರಿಗೂ ಇದರಿಂದ ಕ್ಲೇಶ, ದುಃಖವಾಗುವುದಂತೂ ನಿಜ. ಆದರೆ, ತಮ್ಮ ಗುರಿ ಅತ್ಯಂತ ಉದಾತ್ತವಾದ ಉದ್ದೇಶವುಳ್ಳದ್ದು. ವ್ಯಕ್ತಿಗತವಾದ ಹಾನಿಯೇನೇ ಇದ್ದರೂ, ವ್ಯಕ್ತಿತ್ವ ವಿಕಸನವಂತೂ ನಿಶ್ಚಿತ. ದೇಶದ ಹಿತದೃಷ್ಟಿಯಿಂದ ಈ ಅನಿಷ್ಟ ತುರ್ತುಪರಿಸ್ಥಿತಿ ತೊಲಗಬೇಕು. ಇಂದಿರಾ ಹಟಾವೋ ದೇಶ್ ಬಚಾವೋ ಎಂಬ ಘೋಷಣಾವಾಕ್ಯ ವಾಸ್ತವದಲ್ಲೂ ಕೈಗೂಡಿತೆಂದರೆ ತಮ್ಮ ಹೋರಾಟ ಸಾರ್ಥಕವಾದಂತೆಯೇ ಸರಿ.

ಸೆರೆಮನೆಯಲ್ಲಿ ಅನೇಕರನ್ನು ಕೂಡಿಹಾಕಬಹುದಾದ ಕೊಠಡಿಗೆ ಬ್ಯಾರಕ್ ಎನ್ನುತ್ತಾರೆ. ಹುಬ್ಬಳ್ಳಿಯ ಆ ಸೆರೆಮನೆಯ ಪ್ರತಿ ಬ್ಯಾರಕ್ಕಿನಲ್ಲಿ ತಲಾ ಹತ್ತು ಮಂದಿ ಇರಬಹುದಾಗಿತ್ತು. ಸತ್ಯಾಗ್ರಹಿಗಳ ಗುಂಪಿನಲ್ಲಿದ್ದ ಹದಿನಾಲ್ಕು ಜನರಲ್ಲಿ ಹತ್ತು ಮಂದಿಯನ್ನು ಒಂದು ಬ್ಯಾರಕ್ಕಿನಲ್ಲಿ ಇರಿಸಲಾಯಿತು. ಇನ್ನುಳಿದ ನಾಲ್ವರನ್ನು ಮುನ್ನವೇ ಬಂದಿದ್ದ ಸತ್ಯಾಗ್ರಹಿಗಳೊಡನೆ ಇರಿಸುವ ಸಲುವಾಗಿ ಅಲ್ಲೇ ಪಕ್ಕದ ಬೇರೊಂದು ಬ್ಯಾರಕ್ಕಿಗೆ ಕಳುಹಿಸಲಾಯಿತು. ಪ್ರತಿಯೊಬ್ಬನಿಗೆ ಒಂದೊಂದು ಹೊದಿಕೆ, ತಂಬಿಗೆ ಮತ್ತು ಪ್ಲೇಟು ಕೊಟ್ಟಿದ್ದರು.

ತುರ್ತುಪರಿಸ್ಥಿತಿಯಲ್ಲಿ ಸೆರೆಹಿಡಿಯಲಾದ ಹಿರಿಯ ನಾಯಕರನ್ನು ಮೀಸಾ ಕಾಯ್ದೆಯಡಿ (ಮೇಂಟಿನೆನ್ಸ್ ಆಫ್ ಇಂಟರ್ನಲ್ ಸೆಕ್ಯುರಿಟಿ ಆಕ್ಟ್) ರೀತ್ಯಾ ಬಂಧಿಸಿಡಲಾಗಿತ್ತು. ಈ ಹದಿನಾಲ್ಕು ಸತ್ಯಾಗ್ರಹಿಗಳು ಇನ್ನೂ ವಿಚಾರಣಾಧೀನ ಖೈದಿಗಳು. ಡಿಫೆನ್ಸ್ ಆಫ್ ಇಂಡಿಯಾ ನಿಯಮದ ಪ್ರಕಾರ ಬಂಧಿತರಾಗಿದ್ದವರು.

ಸೆರೆಮನೆಯ ವಾಸವೇನೂ ಸಂತೋಷ ತರುವಂತಹುದಲ್ಲ ಎಂದು ತಿಳಿಯಲು ತುಂಬ ಹೊತ್ತೇನೂ ಬೇಕಾಗಲಿಲ್ಲ. ಅಂದೇ ರಾತ್ರಿ ವಿಷ್ಣುಕಾಂತ ರೋಷದಿಂದ ಎದ್ದುಹೋಗಿ ಬಾಗಿಲಿಗೆ ಒದ್ದ ರಭಸದ ಸದ್ದು ಬಹು ದೂರಕ್ಕೂ ಕೇಳುವಂತಿತ್ತು. ಹುಡುಗ ಎಲ್ಲಾದರೂ ಕೈಕಾಲು ಮುರಿದುಕೊಂಡರೇನು ಗತಿ ಎಂಬ ಆತಂಕ ಫಡಕೆಯವರಿಗೆ. ಅಂತೂ ಬೆಳಗಿನಿಂದ ತಿರುಗಾಡಿದ್ದ ದಣಿವಿನ ಪರಿಣಾಮವಾಗಿ ನಿದ್ರೆಯೇನೋ ಬಂದಿತು.

ಮರುದಿನದಿಂದ ಹುಡುಗರು ಜೈಲುವಾಸಕ್ಕೆ ಒಗ್ಗಿಕೊಳ್ಳಲು ಹವಣಿಸತೊಡಗಿದರು. ಬೆಳಗಾಗಿ ಎಲ್ಲರೂ ಹೊರಗಿನ ಕಟ್ಟೆಯ ಬಳಿ ಸ್ನಾನಮಾಡುವರು. ಸೆರೆವಾಸದಿಂದ ಹುಡುಗರಿಗೆ ಅಧೈರ್ಯವಾಗಬಾರದೆಂದು ಫಡಕೆಯವರು ಸಾಧ್ಯವಿದ್ದಷ್ಟೂ ಅವರಿಗೆ ಸಾಂತ್ವನ ಹೇಳುವ ಸಲುವಾಗಿ ಅಲ್ಲೇ ಕಟ್ಟೆಯ ಮೇಲೆ ಕುಳಿತಿರುವರು.



ಹಾಗೆ ಸುಮ್ಮನೆ ಕೂಡಲು ಪೋಲೀಸರು ಬಿಡಬೇಕಲ್ಲ, ಅದಕ್ಕಾಗಿ ಒಬ್ಬೊಬ್ಬರಾಗಿ ಸ್ನಾನಕ್ಕೆ ಬಂದ ಹುಡುಗರೆಲ್ಲ ತಮ್ಮ ತಲೆಯ ಮೇಲೆ ಒಂದೊಂದು ಬಕೆಟ್ ನೀರು ಸುರುವಿ ಹೋಗಬೇಕೆಂದು ಫಡಕೆ ಹೇಳುತ್ತಿದ್ದರು. ಹುಡುಗರೊಡನೆ ಮಾತನಾಡಿದ ಹಾಗೂ ಆಯಿತು, ಸ್ನಾನ ಮಾಡಿದ ಹಾಗೂ ಆಯಿತು. ಈ ವಿಚಿತ್ರವನ್ನು ಕಂಡ ಜೇಲರ್ ಇದೇಕೆ ಹೀಗೆ? ಎಂದು ಫಡಕೆಯವರನ್ನು ಕೇಳಿದ. "ನಮ್ಮೂರಿನಲ್ಲಿ ಹೊಳೆ ಇದೆಯಪ್ಪಾ, ಮನಸ್ಸಿಗೆ ಬಂದಷ್ಟು ಹೊತ್ತು ಸ್ನಾನ ಮಾಡಿ ಈಜುತ್ತಾ ಇದ್ದೆ. ಇಲ್ಲಿ ಇಷ್ಟಾದರೂ ನೀರು ಸುರುವುತ್ತಾರಲ್ಲ, ಅಷ್ಟೇ ಸಮಾಧಾನ" ಎಂದ ಫಡಕೆಯವರ ಮಾತಿಗೆ ಏನು ಹೇಳಬೇಕೋ ತಿಳಿಯದೆ ಜೇಲರ್ ಸುಮ್ಮನಾದ.

ಸತ್ಯಾಗ್ರಹಿಗಳು ಜೈಲಿನಲ್ಲೂ ತಮ್ಮ ಸಂಘರ್ಷ ಮುಂದುವರಿಸಿದ್ದರು. ಮೊದಲಿಗೇ ಜೈಲಿನ ಅಧಿಕಾರಿಗಳು "ಹಗಲಾಗಲಿ ರಾತ್ರಿಯಾಗಲಿ ಇಲ್ಲಿ ಘೋಷಣೆಗಳನ್ನು ಕೂಗುವಂತಿಲ್ಲ, ಏನಾದರೂ ಘೋಷಣೆ ಕೂಗಿದರೆ ನಿಮ್ಮ ಮೇಲೆ ಹೊಸದಾಗಿ ಇನ್ನೊಂದು ಕೇಸ್ ಹಾಕುತ್ತೇವೆ" ಎಂದು ಬೆದರಿಸಿದ್ದರು. ಜೈಲಿನ ಸಿಬ್ಬಂದಿಗೆ ವಿಚಾರಣಾಧೀನ ಖೈದಿಗಳ ಮೇಲೆ ಮೊಕದ್ದಮೆ ಹೂಡಲು ಸಾಧ್ಯವಿಲ್ಲ ಎಂದು ಈ ವಿದ್ಯಾರ್ಥಿಗಳಿಗೆ ತಿಳಿದಿತ್ತು. ವಕೀಲವೃತ್ತಿಗಾಗಿ ವ್ಯಾಸಂಗಮಾಡಿದ್ದ ನರಹರಿ ಫಡಕೆಯವರೇ ಜೊತೆಗಿದ್ದರಲ್ಲ! ಹುಡುಗರು ಕೂಗುತ್ತಲೇ ಇರುತ್ತಿದ್ದರು:

ಸನ್ ಚೌಹತ್ತರ ಭೂಲ್ ನ ಜಾನಾ, ಸತ್ತಾ ಮದ್ ಮೇ ಡೂಬ್ ನ ಜಾನಾ!
ಎಮರ್ಜೆನ್ಸಿ ಕೇ ತೀನ್ ದಲಾಲ್, ಇಂದಿರಾ ಸಂಜಯ್ ಬನ್ಸಿಲಾಲ್!
ಅಂಧೇರೇ ಮೇ ಏಕ್ ಪ್ರಕಾಶ್- ಜಯಪ್ರಕಾಶ್, ಜಯಪ್ರಕಾಶ್!

ಬಂದೀಖಾನೆಯ ಜೈಲರ್ ಅಧಿಕಾರಿಗೂ ಉಳಿದ ಸಿಬ್ಬಂದಿಗೂ ಈ ಸತ್ಯಾಗ್ರಹಿಗಳು ಉಳಿದ ಅಪರಾಧಿ ಖೈದಿಗಳಂತಲ್ಲ, ಎಲ್ಲ ಸುಶಿಕ್ಷಿತ ಯುವಕರು, ಒಳ್ಳೆಯ ಕುಟುಂಬಗಳಿಂದ ಬಂದವರು ಎಂಬುದರ ತಿಳಿವಳಿಕೆಯಿತ್ತು. ಹಾಗಾಗಿ ಇವರ ವಿಷಯದಲ್ಲಿ ಸಹಾನುಭೂತಿ, ಸಂಯಮಗಳಿಂದಲೇ ವರ್ತಿಸುತ್ತಿದ್ದರು. ಏನಿದ್ದರೂ ಅವರು ಸರ್ಕಾರಿ ನಿಯಮಗಳ ಪ್ರಕಾರ ನಡೆದುಕೊಳ್ಳಬೇಕಾಗಿದ್ದುದರಿಂದ ಪ್ರತ್ಯಕ್ಷವಾಗಿ ನೆರವಿಗೆ ಬರುತ್ತಿರಲಿಲ್ಲ.

ಸತ್ಯಾಗ್ರಹಿ ಹುಡುಗರು ಸೆರೆಮನೆಯಲ್ಲಿ ತಮಗೆ ದೊರೆಯಬೇಕಾದ ಸವಲತ್ತುಗಳಿಗಾಗಿ ಬೇಡಿಕೆ ಮಂಡಿಸತೊಡಗಿದರು. ಮೊದಲನೆಯದಾಗಿ ತಾವು ಇನ್ನೂ ವಿಚಾರಣಾಧೀನರು. ಅಪರಾಧಿಗಳಲ್ಲ. ಹೀಗಿರುವಾಗ ಯಾವುದೇ ಅಪರಾಧಿಯನ್ನು ತಮ್ಮೊಡನೆಯಾಗಲಿ, ಅಪರಾಧಿಗಳಿರುವಲ್ಲಿ ಸತ್ಯಾಗ್ರಹಿಯನ್ನಾಗಲಿ ಸೇರಿಸತಕ್ಕದ್ದಲ್ಲ. ಇದನ್ನು ಒಪ್ಪಿಕೊಂಡ ಅಧಿಕಾರಿಗಳು ಇವರು ಪ್ರತ್ಯೇಕ ಬ್ಯಾರಕ್ಕಿನಲ್ಲಿರುವುದಕ್ಕೆ ಬೇಕಾದ ವ್ಯವಸ್ಥೆ ಮಾಡಿದ್ದರು.

ಅಪರಾಧಿಗಳನ್ನು ಬೆಳಗ್ಗೆ ಏಳರಿಂದ ಒಂಬತ್ತು ಗಂಟೆಯವರೆಗೆ ಮಾತ್ರ ಬ್ಯಾರಕ್ಕಿನಿಂದ ಹೊರಗೆ ಬಿಡುತ್ತಿದ್ದರು. ಈ ಸಮಯನಿರ್ಬಂಧವನ್ನು ತಮಗೆ ಅನ್ವಯಿಸುವ ಹಾಗಿಲ್ಲವೆಂದು ಸತ್ಯಾಗ್ರಹಿಗಳ ವಾದ. ನಮಗೆ ಸಂಜೆ ಹೊತ್ತು ಶಾಖೆ ನಡೆಸುವುದಿದೆ, ಆಟ ಆಡಲು ಅವಕಾಶವಿರಬೇಕು ಎಂದೆಲ್ಲ ಹೇಳಿ ಸಂಜೆಯೂ ಬ್ಯಾರಕ್ಕಿನಿಂದ ಹೊರಬರುವುದಕ್ಕೆ ಅವಕಾಶ ಮಾಡಿಕೊಂಡಿದ್ದರು. ಆ ವೇಳೆಯಲ್ಲಿ ಜೈಲಿನ ಹೊರಗಡೆ ತಿರುಗಾಡುವ ಜನರಿಗೆ ಕೇಳಿಸುವಂತೆ ಜೈಲಿನ ಹೊರಬಾಗಿಲ ಹತ್ತಿರ ಬಂದು ಜೋರಾಗಿ ಘೋಷಣೆ ಕೂಗುವುದೂ ನಡೆದಿತ್ತು. ಇವರ ಈ ಸಂಭ್ರಮ ನೋಡಿ ಜೈಲಿನಲ್ಲಿದ್ದ ಅಪರಾಧಿಗಳಿಗೂ ಒಂದು ರೀತಿ ಮನಸ್ಸಿಗೆ ಸಂತೋಷವಾಗುವಂತಿತ್ತು.

ಪುಟ 5 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ಆ ದಿಟ್ಟ ನಿರ್ಧಾರಗಳೇ ಇತಿಹಾಸವನ್ನು ಸೃಷ್ಟಿಸಿದವು!

ಕಾಶ್ಮೀರ ಭವನದ ನಿರ್ಮಾಣ ಮಾತ್ರವಲ್ಲ ೧೯೯೦ರ ದಶಕದಲ್ಲಿ ಜಮ್ಮು-ಕಾಶ್ಮೀರದಿಂದ ನಿರಾಶ್ರಿತರಾಗಿ ಬಂದಿದ್ದ ಪಂಡಿತರಿಗೆ ಅನಂತಕುಮಾರ್ ಹಲವು ಬಗೆಯಲ್ಲಿ ನೆರವಿನ ಹಸ್ತ ಚಾಚಿದರು. ಉದ್ಯೋಗ ಕೊಡಿಸಿದರು.

ಭಾರತದ ರಕ್ಷಣಾ ಸಾಮರ್ಥ್ಯ ಅಗಾಧವಾಗಿ ವೃದ್ಧಿಯಾಗಿರುವ ಇಂದಿನ ದಿನಗಳನ್ನು ಅವಲೋಕಿಸುವಾಗ ಇದರ ಹಿಂದಿನ ಶ್ರಮ, ನಿರಂತರವಾಗಿ ನಡೆದ ಪ್ರಯತ್ನಗಳು, ಅನ್ವೇಷಣೆಗಳೆಲ್ಲ ಕಣ್ಣು ಮುಂದೆ ಹಾದುಹೋದವು. ಇನ್ನೊಂದು ವಿಶೇಷ ಸಂದರ್ಭವನ್ನು ಇಲ್ಲಿ ಪ್ರಸ್ತಾಪಿಸಲೇ ಬೇಕು. ಅದಮ್ಯ ಚೇತನ ಸಂಸ್ಥೆಯ ಸಂಸ್ಥಾಪಕರೂ ಮತ್ತು ಪ್ರಧಾನ ಪೋಷಕರಾಗಿದ್ದ ಶ್ರೀ ಅನಂತಕುಮಾರ್ ಅವರ ಮಾರ್ಗದರ್ಶನದಲ್ಲಿ ಪ್ರತಿವರ್ಷ ನಡೆಯುತ್ತಿದ್ದ ಅದಮ್ಯ ಚೇತನ ಸೇವಾ ಉತ್ಸವವು ಒಂದು ವಿಶಿಷ್ಟ ಕಾರ್ಯಕ್ರಮ. ೨೦೧೫ ಮತ್ತ ೨೦೧೬ ರ ಉತ್ಸವದಲ್ಲಿ ಭಾರತದ ಅತ್ಯಾಧುನಿಕ ಕ್ಷಿಪಣಿಗಳು, ಯುದ್ಧ ವಿಮಾನಗಳು ಮತ್ತು ರಾಡಾರ್‌ಗಳು ಸಾರ್ವಜನಿಕರ ಕಣ್ಮನ ಸೆಳೆದಿದ್ದು ನಮ್ಮ ರಕ್ಷಣಾ ಸಾಮರ್ಥ್ಯದ ಹೆಮ್ಮೆಯ ಪ್ರತೀಕವಾಗಿತ್ತು.

ಕೇಂದ್ರ ಸಚಿವರಾಗಿದ್ದ ಶ್ರೀ ಅನಂತಕುಮಾರ್ ಅವರ ನಿರಂತರ ಪ್ರಯತ್ನದ ಫಲವಾಗಿ, ಕ್ಷಿಪಣಿಗಳು, ಯುದ್ಧ ವಿಮಾನಗಳು ಮತ್ತು ರಾಡಾರ್‌ಗಳಂತಹ ಭಾರತದ ಹೆಮ್ಮೆಯ ಶಸ್ತ್ರಾಸ್ತ್ರಗಳನ್ನು ನೇರವಾಗಿ ನೋಡುವ ಅವಕಾಶ ಸಾರ್ವಜನಿಕರಿಗೆ ಲಭ್ಯವಾಯಿತು. ಈ ಉತ್ಸವದಲ್ಲಿ ಮಂಗಳಯಾನ, ಚಂದ್ರಯಾನ-೧, ಪಿಎಸ್ಎಲ್‌ವಿ, ಜಿಎಸ್ಎಲ್‌ವಿ, ಕಾವೇರಿ ಇಂಜಿನ್, ತೇಜಸ್ ಯುದ್ಧ ವಿಮಾನ, ಮಾನವ ರಹಿತ ರುಸ್ತುಂ-೧, ನಿಶಾಂತ್, ಹಗುರ ಯುದ್ಧ ವಿಮಾನಗಳು, ಹಂಸ - ತರಬೇತಿ ವಿಮಾನ, ಸಾರಸ್ ವಿಮಾನ್ , ಹಗುರ ಹೆಲಿಕಾಪ್ಟರ್, ಧ್ರುವ ಮತ್ತು ಮಾನವ ರಹಿತ ಆಕಾಶ ವಾಹನ ಲಕ್ಷ್ಯ ಮುಂತಾದ ವೈಜ್ಞಾನಿಕ ಸಾಧನಗಳ ಪ್ರದರ್ಶನದ ಜೊತೆಗೆ ಆಕಾಶ್, ಅಗ್ನಿ ಮತ್ತು ಪೃಥ್ವಿ ಕ್ಷಿಪಣಿಗಳು ಎಲ್ಲರ ಆಕರ್ಷಣೆಯ ಕೇಂದ್ರಬಿಂದುವಾಗಿದ್ದವು. ಈ ಉತ್ಸವದ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ SU-೩೦ ಯುದ್ಧ ವಿಮಾನದ ಕಾಕ್‌ಪಿಟ್ ಮಾದರಿ. ಇದರೊಳಗೆ ಕುಳಿತು ಪೈಲೆಟ್‌ನ ಅನುಭವವನ್ನು ಪಡೆಯುವ ಅವಕಾಶ ಅನೇಕರಿಗೆ ಒಂದು ರೋಮಾಂಚಕ ಅನುಭವವಾಗಿತ್ತು. ಶ್ರೀ ಅನಂತಕುಮಾರ್ ಅವರ ದೂರದೃಷ್ಟಿಯ ಫಲವಾಗಿ ಇದು ಕೇವಲ ಪ್ರದರ್ಶನವಾಗಿ ಇರದೆ ನಮ್ಮ ರಕ್ಷಣಾ ಬಲದ ಸಾಮರ್ಥ್ಯ ಅನಾವರಣಗೊಳಿಸುವ ಅಪರೂಪದ ಕ್ಷಣವಾಗಿತ್ತು.




**ತೇಜಸ್ ಲಘು ಯುದ್ಧ ವಿಮಾನದ ವೈಶಿಷ್ಟ್ಯ :**

ತೇಜಸ್ ಲಘು ಯುದ್ಧ ವಿಮಾನವು ಭಾರತದ ಹೆಮ್ಮೆಯ ಸ್ವದೇಶಿ ನಿರ್ಮಿತ ರಕ್ಷಣಾ ಸಾಧನವಾಗಿದೆ. ತನ್ನದೇ ಆದ ವೈಶಿಷ್ಟ್ಯ ಹೊಂದಿರುವ ಈ ಯುದ್ಧ ವಿಮಾನವು ಅದರ ವಿಭಾಗದಲ್ಲಿಯೇ ಅತ್ಯಂತ ಹಗುರವಾದದ್ದು ಮತ್ತು ಏಕ ಇಂಜಿನ್‌ನಿಂದ ಕಾರ್ಯನಿರ್ವಹಿಸುತ್ತದೆ. ಬೆಂಗಳೂರಿನ ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಮತ್ತು ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ ಇವರ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾದ ಈ ವಿಮಾನವು ತನ್ನ ನಿಖರತೆ ಮತ್ತು ಕ್ಷಿಪ್ರ ಗತಿಯಲ್ಲಿ ದಿಕ್ಕು ಬದಲಾಯಿಸುವ ಸಾಮರ್ಥ್ಯದಿಂದ ಗಮನ ಸೆಳೆಯುತ್ತದೆ.

**ತೇಜಸ್‌ಗೆ ನಾಮಕರಣ:**

ಸುಮಾರು ಒಂದು ದಶಕದ ಕಾಲ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯಲ್ಲಿ ಲಘು ಯುದ್ಧ ವಿಮಾನದ ತಯಾರಿಕೆಯಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್. ಮೇ ೪, ೨೦೦೩, ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಲಘು ಯುದ್ಧ ವಿಮಾನದ ಉದ್ಘಾಟನೆಗೆಂದು ಬೆಂಗಳೂರಿಗೆ ಬಂದಿದ್ದರು. ಅಚ್ಚರಿ ಮತ್ತು ಖುಷಿಯ ಸಂಗತಿಯೆಂದರೆ ಅಂದು ಬೆಳಗಿನ ಉಪಾಹಾರಕ್ಕೆ ಕುಮಾರಕೃಪಾ ಅತಿಥಿಗೃಹಕ್ಕೆ ಅನಂತಕುಮಾರ್ ಅವರ ಜೊತೆ ತೇಜಸ್ವಿನಿ ಅವರನ್ನೂ ಆಹ್ವಾನಿಸಿದ್ದರು. ಉಪಾಹಾರದ ಸಂದರ್ಭದಲ್ಲಿ, 'ವಿಮಾನ ಕೋ ಕ್ಯಾ ನಾಮ್ ರಖಾ ಜಾಯ್?' ಎಂದು ಅಟಲಜೀ ತಮ್ಮದೇ ಶೈಲಿಯಲ್ಲಿ ಪ್ರಶ್ನಿಸಿದರು.




ದೇಶದ ಪ್ರಧಾನಿಯಾಗಿ ತಮ್ಮನ್ನು ಕೇಳುತ್ತಿದ್ದಾರಲ್ಲ ಎಂದು ತೇಜಸ್ವಿನಿಯವರಿಗೆ ಖುಷಿ ಮತ್ತು ಅಚ್ಚರಿಯ ಭಾವ ಒಟ್ಟೊಟ್ಟಿಗೆ. 'ನೀವು ಪ್ರಧಾನಿ ನಿಮ್ಮ ವಿವೇಚನೆಗೆ ಬಿಟ್ಟಿದ್ದು' ಎಂದು ಸೌಜನ್ಯದಿಂದ ಅನಂತಕುಮಾರ್ ಅವರು ಉತ್ತರಿಸಿದಾಗ, 'ಏನು ಹೆಸರು ಅಂತ ತಿಳಿದುಕೊಳ್ಳಬಹುದೆ?' ಎಂದು ತೇಜಸ್ವಿನಿಯವರು ಅಟಲಜೀಯವರಲ್ಲಿ ಕೇಳಿದರು. ಆಗ ಅವರು ಮುಗುಳ್ನಗೆ ಬೀರುತ್ತ, 'ಕಾರ್ಯಕ್ರಮಕ್ಕೆ ಬರ್ತಾ ಇದ್ದಿರಲ್ಲ, ಅಲ್ಲಿ ಗೊತ್ತಾಗುತ್ತದೆ' ಎಂದರು. ಎಚ್ಎಎಲ್‌ನಲ್ಲಿ ನಡೆದ ಆ ಐತಿಹಾಸಿಕ ಸಮಾರಂಭದಲ್ಲಿ ಅಟಲ್ ಜೀ ಅವರು ಭಾರತದ ಹೆಮ್ಮೆಯ ಸ್ವದೇಶಿ ನಿರ್ಮಿತ ಲಘು ಯುದ್ಧ ವಿಮಾನಕ್ಕೆ "ತೇಜಸ್" ಎಂದು ನಾಮಕರಣ ಮಾಡಿದಾಗ ತೇಜಸ್ವಿನಿಯವರಿಗೆ ಸಂತೃಪ್ತಿಯ ಖುಷಿ ಮತ್ತು ಈ ಯುದ್ಧವಿಮಾನ (ತೇಜಸ್) ತಯಾರಿಕೆಯಲ್ಲಿ ಕೆಲಸ ಮಾಡಿದ್ದು ಸಾರ್ಥಕತೆ ಮೂಡಿಸಿತು.

ಹೀಗೆ ರಕ್ಷಣೆಯ ವಿಷಯದಲ್ಲಿ ಮಹತ್ವದ ಮೈಲಿಗಲ್ಲುಗಳು ನಿರ್ಮಾಣವಾಗಿದ್ದು ದೂರದೃಷ್ಟಿಯ ನಾಯಕತ್ವದಿಂದಾಗಿ. ಜಮ್ಮು-ಕಾಶ್ಮೀರದ ಪಾಲಿಗೆ ಕಂಟಕವಾಗಿದ್ದ ಸಂವಿಧಾನದ ೩೭೦ನೇ ವಿಧಿಯನ್ನು ಹಿಂಪಡೆಯಬೇಕು ಮತ್ತು ಆ ಮೂಲಕ ವಿಶೇಷ ಸ್ಥಾನಮಾನ ರದ್ದುಗೊಳಿಸಬೇಕು ಎಂದು ಅನಂತಕುಮಾರ್ ಅವರು ಬಹು ಪ್ರಖರವಾಗಿ ಪ್ರತಿಪಾದಿಸುತ್ತಿದ್ದರು. ಬಿಜೆಪಿಯ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲೇ ಅವರು ಈ ಬಗ್ಗೆ ಉದ್ಬೋಧಕ ಉಪನ್ಯಾಸಗಳನ್ನು ನೀಡುತ್ತಿದ್ದರು. ಇದಕ್ಕಾಗಿ ಅವರಿಗೆ ರಾಷ್ಟ್ರದ ವಿವಿಧೆಡೆಗಳಿಂದ, ದೊಡ್ಡ ವೇದಿಕೆಗಳಿಂದ ಆಹ್ವಾನ ಬರುತ್ತಿತ್ತು. ಅಂದರೆ, ೩೭೦ನೇ ವಿಧಿ ಕಾಶ್ಮೀರದ ಪಾಲಿಗೆ ಶಾಪವಾಗಿದೆ ಅದನ್ನು ಹಿಂಪಡೆಯಬೇಕು ಎಂಬ ಸ್ಪಷ್ಟವಾದ ಅಭಿಪ್ರಾಯವನ್ನು ಹೊಂದಿದ್ದಲ್ಲದೆ ಅದನ್ನು ಜನಮಾನಸಕ್ಕೆ ಮನದಟ್ಟು ಮಾಡಿಕೊಟ್ಟ ಹೆಗ್ಗಳಿಕೆ ನಿಸ್ಸಂಶಯವಾಗಿ ಅನಂತಕುಮಾರ್ ಅವರಿಗೆ ಸಲ್ಲುತ್ತದೆ. ಕೊನೆಗೆ ಆ ದಿನ ಬಂದೇ ಬಿಟ್ಟಿತು. ಕೇಂದ್ರ ಸರ್ಕಾರ ದಿಟ್ಟ ನಿರ್ಣಯ ಕೈಗೊಂಡು ೨೦೧೯ರ ಆಗಸ್ಟ್ ೫ರಂದು ೩೭೦ನೇ ವಿಧಿಯನ್ನು ಕಾಶ್ಮೀರದಿಂದ ಹಿಂಪಡೆಯಿತು. ದಶಕಗಳ ಕನಸು ನನಸಾಯಿತು, ಇದರ ಹಿಂದಿನ ಶ್ರಮ, ಸುದೀರ್ಘ ಹೋರಾಟ ಫಲ ನೀಡಿತು. ಆ ದಿನವನ್ನು ನೋಡಲು ಅನಂತಕುಮಾರ್ ಅವರು ಇರಲಿಲ್ಲ ಎಂಬುದು ವಿಷಾದನೀಯ. ಆದರೆ, ಅನಂತಕುಮಾರ್ ಅವರ ಕೆಲಸ ಈ ಮೂಲಕ ಪೂರ್ಣಗೊಂಡಿತ್ತು.

ರಾಷ್ಟ್ರದ ರಕ್ಷಣೆ ನಿಟ್ಟಿನಲ್ಲಿ ದಿಟ್ಟವಾದ ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತು ದೃಢವಾಗಿ ಆ ನಿಟ್ಟಿನಲ್ಲಿ ಹೆಜ್ಜೆ ಇರಿಸುವುದು ಸುಲಭದ ಮಾತೇನಲ್ಲ. ಆದರೆ, ದಿಟ್ಟ ಮತ್ತು ದೂರದೃಷ್ಟಿಯ ನಾಯಕತ್ವದ ಫಲದಿಂದಾಗಿ ಭಾರತದ ರಕ್ಷಣಾ ಸಾಮರ್ಥ್ಯ ಇಂದು ಅಗಾಧವಾಗಿ ಬೆಳೆದಿದೆ, ಯಾವುದೇ ಸವಾಲನ್ನು ಎದುರಿಸಲು ರಕ್ಷಣಾ ಪಡೆಗಳು ಸನ್ನದ್ಧವಾಗಿವೆ. ಇಂಥ ಸ್ಥಿತಿ ಸೃಷ್ಟಿಯಾಗಬೇಕಾದರೆ ದೇಶದ ಹಿತವನ್ನೇ ಗಮನದಲ್ಲಿ ಇರಿಸಿಕೊಂಡು ಸದಾ ಕಾಲ ಕೆಲಸ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಹರ್ನಿಶಿಯಾಗಿ ಶ್ರಮಿಸಿದ ಅಟಲ್ ಬಿಹಾರಿ ವಾಜಪೇಯಿ, ಅನಂತಕುಮಾರ್, ಮನೋಹರ್ ಪರಿಕರ್ ಪ್ರೇರಣೆಯಾಗಿ ಮತ್ತೆ ಮತ್ತೆ ನೆನಪಾಗುತ್ತಾರೆ, ನಾಳೆಗಳಿಗೆ ಸ್ಫೂರ್ತಿ ನೀಡುತ್ತಾರೆ.



# ಸಾಹಿತ್ಯ ಸಂಭ್ರಮದಲ್ಲಿ "ಅನಂತಪಥ" ಬಿಡುಗಡೆ!





ನಾಡಿನ ಸಮಾಚಾರ ದಿನಪತ್ರಿಕೆ ಮತ್ತು ಅದಮ್ಯ ಚೇತನ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ, ನಾಡಿನ ಸಮಾಚಾರ ಸೇವಾ ಸಂಘದ 3ನೇ ವಾರ್ಷಿಕೋತ್ಸವ ಮತ್ತು ವಿಶ್ವ ಮಹಿಳಾ ದಿನೋತ್ಸವದ ಅಂಗವಾಗಿ ಆಯೋಜಿಸಲಾದ "ಸಾಹಿತ್ಯ ಸಂಭ್ರಮೋತ್ಸವ" ಕಾರ್ಯಕ್ರಮದಲ್ಲಿ, ಅನಂತಕುಮಾರ್ ಪ್ರತಿಷ್ಠಾನ ಪ್ರಕಟಿಸುತ್ತಿರುವ ಮಾಸಪತ್ರಿಕೆ "ಅನಂತಪಥ" ಏಪ್ರಿಲ್ ತಿಂಗಳ 58ನೇ ಸಂಚಿಕೆಯನ್ನು ಏಪ್ರಿಲ್ 22 ರಂದು ಕನ್ನಡ ಚಿತ್ರರಂಗದ ಜನಪ್ರಿಯ ನಟ ಶ್ರೀ ಅನಿರುದ್ಧ್ ಜಟ್ಕರ್ ಅವರು ಬಿಡುಗಡೆ ಮಾಡಿ ಈ ಸಮಾರಂಭವನ್ನು ಮೆರೆಗುಗೊಳಿಸಿದರು.

ಈ ಸಂದರ್ಭದಲ್ಲಿ, ಲೇಖಕಿ ಶ್ರೀಮತಿ ತೇಜೋವತಿ ಗಂಗಾಧರ್ ಅವರ "ಪಕ್ಷಿನೋಟ" ಪುಸ್ತಕ ಹಾಗೂ ಲೇಖಕಿ ಶ್ರೀಮತಿ ವಿಜಯಾ ವಿಷ್ಣುಭಟ್ ಅವರ "ಡಾ. ಭರತ್ ಜಂಗಮ್ ವ್ಯಕ್ತಿಯಲ್ಲ ಶಕ್ತಿ" ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಜೊತೆಗೆ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಹಾಗೂ ಸಾಧನೆಗೈದ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ "ಸಾಧಕ ರತ್ನ" ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ, ನಾಡಿನ ಸಮಾಚಾರ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜ ವಾಯ್. ಉಪ್ಪಾರಟ್ಟಿ ಹಾಗೂ, ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಬಸವರಾಜ ಉಪ್ಪಾರಟ್ಟಿ, ಡಾ. ಕೊಳ್ಳಪ್ಪೆ ಗೋವಿಂದ್ ಭಟ್, ಶ್ರೀ ಎಬೇನೇಜರ್ ಕರಬನ್ನವರ, ಸಂಘದ ಕಾರ್ಯಕರ್ತ ಬಂಧುಗಳು ಮೊದಲಾದವರು ಉಪಸ್ಥಿತರಿದ್ದರು.

ಪುಟ 3 ರಿಂದ

ಅಪರಾಧಿಗಳನ್ನು ಕೆಲಸಕ್ಕೆ ತೊಡಗಿಸುವ ಹಾಗೆ ತಮಗೆ ಯಾವುದೇ ಕೆಲಸ ಕೊಡುವಂತಿಲ್ಲವೆಂದು ಹುಡುಗರು ತಗಾದೆ ತೆಗೆದರು. ಯಾವ ಯಾವ ಬಗೆಯ ಖೈದಿಗಳಿಗೆ ಯಾವ ಯಾವ ರಿಯಾಯಿತಿ ಅನ್ವಯಿಸುವುದೆಂಬುದನ್ನು ಒಳಗೊಂಡ ಜೈಲ್ ಮ್ಯಾನ್ಯುಯಲ್ ಎಂಬ ಮಾರ್ಗದರ್ಶಿ ಸೂತ್ರಗಳಿರುವ ಪುಸ್ತಕ ತಂದು ತೋರಿಸುವಂತೆ ಕೇಳತೊಡಗಿದರು. ತಮಗೆ ಕೊಡುವ ಆಹಾರ ಎಷ್ಟು ತೂಕದ ಪ್ರಮಾಣವಿರಬೇಕು, ವಾರಕ್ಕೊಂದು ಸಲವಾದರೂ ಸಿಹಿತಿಂಡಿ ಕೊಡಬೇಕು ಎಂಬುದನ್ನೆಲ್ಲಾ ಆ ಮ್ಯಾನ್ಯುಯೆಲ್ ತೋರಿಸಿಯೇ ಒತ್ತಾಯಪೂರ್ವಕ ಕೇಳತೊಡಗಿದರು.


ನರಹರಿ ಫಡಕೆಯವರು ಸತ್ಯಾಗ್ರಹಿ ಗುಂಪಿನ ಹಿರಿಯರು ಮಾತ್ರವಲ್ಲ, ಮಾರ್ಗದರ್ಶಕರೂ ಆಗಿದ್ದರು. ಸೆರೆಮನೆಯಲ್ಲಿ ಇರುವಾಗಲೂ ಯಾವ ಶಿಸ್ತನ್ನು ಹೇಗೆ ಪಾಲಿಸಬೇಕೆನ್ನುವುದನ್ನು ಕ್ರಮಬದ್ಧವಾಗಿ ತೋರಿಸಿಕೊಡುತ್ತಿದ್ದರು. ರಾತ್ರಿ ಮಲಗುವಾಗ ಹಾಸಿಗೆಯನ್ನು ಹಾಸಿಕೊಳ್ಳುವುದು ಹೇಗೆ, ಯಾವ ರೀತಿ ನೆರಿಗೆ, ಸುಕ್ಕುಗಳಿಲ್ಲದಂತೆ ಹೊದಿಕೆಯನ್ನು ಹಾಸುವುದು ಎನ್ನುವುದನ್ನೆಲ್ಲ ಅವರು ಆಗ ತೋರಿಸಿಕೊಟ್ಟದ್ದನ್ನು ಅನಂತಕುಮಾರ್ ತಮ್ಮ ಜೀವನದುದ್ದಕ್ಕೂ ಮರೆತಿರಲಿಲ್ಲ.

ಹೊತ್ತು ಹೋಗುವುದಕ್ಕೆಂದು ಎಲ್ಲರೂ ಒಂದಿಷ್ಟು ವಿನೋದ, ಮನರಂಜನೆಗೂ ಅವಕಾಶ ಕಲ್ಪಿಸಿಕೊಂಡಿದ್ದರು. ಜೈಲಿನಲ್ಲಿದ್ದವರಲ್ಲಿ ಶ್ಯಾಮ್ ಕಾಪ್ಸೆಯೂ ಒಬ್ಬರು. ಅವರು ಹಿರಿಯ ಸ್ವಯಂಸೇವಕರಾಗಿದ್ದ ರಾಮಣ್ಣ ಕಾಪ್ಸೆಯವರ ಮಗ. ಒಳ್ಳೆಯ ದೇಶಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಕೀರ್ತನೆ ಭಜನೆಗಳೂ ನಡೆಯುತ್ತಿದ್ದವು.

ಬ್ಯಾರಕ್ಕಿನ ಮೂಲೆಯಲ್ಲಿ ಶೌಚಾಲಯ. ಅದಕ್ಕೆ ಬಾಗಿಲು ಎಂಬುದಿಲ್ಲ. ಒಳಗೆ ಹೋದವರು ತಾವು ಅಲ್ಲಿದ್ದೇವೆ ಎನ್ನುವುದರ ಸೂಚನೆಗೆ ತಮ್ಮ ತಂಬಿಗೆಯನ್ನು ಹೊರಗಿಟ್ಟು ಶೌಚಕ್ಕೆ ಹೋಗಬೇಕಾಗಿತ್ತು. ಹುಡುಗರಿಗೆ ಸ್ವಲ್ಪ ಮನರಂಜನೆ ಬೇಕಿತ್ತಲ್ಲ, ಯಾರಾದರೊಬ್ಬರು ಹುಡುಗಾಟಕ್ಕೆ ತಂಬಿಗೆ ತೆಗೆದಿಟ್ಟುಬಿಡುವರು. ಒಳಗಿದ್ದವರಿಗೆ ಸ್ವಲ್ಪ ಫಜೀತಿ. ತಂಬಿಗೆ ಸಿಗುವವರೆಗೆ ಪಾಪ, ಎದ್ದು ಬರುವ ಹಾಗೂ ಇಲ್ಲ!

## ಸಾಮಾಜಿಕ ಜಾಲತಾಣದಿಂದ

### ವಿಶ್ವ ಜೀವ ವೈವಿಧ್ಯ ದಿನ



ಮೇ 22, ಭೂತಾಯಿಯ ಜೀವವೈವಿಧ್ಯ ಸಂಭ್ರಮಿಸುವ ದಿನ

ಇಂತಹ ಅದ್ಭುತ ಜಗತ್ತಿನಲ್ಲಿ ನಾವಿದ್ದೇವೆ ಎನ್ನುವ ಸತ್ಯವನ್ನು ಅರಿತು ಸೃಷ್ಟಿಕರ್ತನನ್ನು ನಮಿಸುವ ದಿನ

ಈ ಅಗಾಧ ವಿಸ್ಮಯವನ್ನು ಗುರುತಿಸಿ ಮುಂದಿನ ಪೀಳಿಗೆಗೆ ಹೀಗೆಯೇ ಹಸ್ತಾಂತರಿಸುವ ಬಯಕೆಯ ದಿನ

ಪ್ರಕೃತಿಯ ಪ್ರತಿ ಜೀವಿಯ ಮೌಲ್ಯವನ್ನು ಅರಿತು ಅದರ ರಕ್ಷಣೆಯ ಕಡೆಗೆ ಹೆಜ್ಜೆ ಇಡಲೇ ಬೇಕಾದ ದಿನ.

ಪುಟ 1 ರಿಂದ











**ಕಾಶ್ಮೀರದ ಪೆಹಲ್ಗಾಮ್ ನರಮೇಧ ಖಂಡಿಸಿ, ಬಿತ್ತಿ ಚಿತ್ರಗಳನ್ನು ಹಿಡಿದು ಪಾಕಿಸ್ತಾನ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತ ಪಡಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.**





ಸಂಜೆ 4:30 ಕ್ಕೆ ಉತ್ಸವದ ಭಾಗವಾಗಿ ಶ್ರೀ ರಾಜೇಂದ್ರ ಹೆಗಡೆಯವರು ಕೆಮಿಕಲ್ ರಹಿತ ಸೋಪ್ ಮತ್ತು ಡಿಟರ್ಜೆಂಟ್ ತಯಾರಿಕೆ, ಬಳಕೆ ಮತ್ತು ತಾರಸಿ ತೋಟದ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. 80ಕ್ಕೂ ಹೆಚ್ಚು ಜನರು ಈ ಕಾರ್ಯಾಗಾರದಲ್ಲಿ ಆಸಕ್ತಿಯಿಂದ ಭಾಗವಹಿಸಿದರು.

ಶ್ರೀಮತಿ ರಾಧಿಕಾ ಓಕ್ ಅವರ ನಿರ್ದೇಶನದಲ್ಲಿ ಭಗವದ್ಗೀತೆ ಸಂವಾದ ಎಂಬ ರೂಪಕವನ್ನು ಪ್ರದರ್ಶಿಸಲಾಯಿತು. ಭಗವದ್ಗೀತೆಯ 18 ಅಧ್ಯಾಯಗಳ ಸಾರವನ್ನು ಒಳಗೊಂಡ ಈ ರೂಪಕದಲ್ಲಿ ಅರ್ಜುನ ಮತ್ತು ಕೃಷ್ಣ ವೇಷಧಾರಿಗಳು ಅದ್ಭುತವಾಗಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಅನಂತ ಉತ್ಸವದ ಅಂಗವಾಗಿ ಏಪ್ರಿಲ್ ತಿಂಗಳ ಮೊದಲ ಎರಡು ವಾರಗಳಲ್ಲಿ ಶ್ರೀಮತಿ ಸ್ವಾತಿ ಪಟ್ವೇದ್ , ವೀಣಾ ಅರವಲೆ, ಶ್ರೀಮತಿ ರಾಧಿಕಾ ಓಕ್ , ಅವರ ನೇತೃತ್ವದಲ್ಲಿ ಭಗವದ್ಗೀತೆ ಪಠಣ ಸ್ಪರ್ಧೆ, ಭಜನಾ ಸ್ಪರ್ಧೆ, ಯೋಗಾಸನ ಸ್ಪರ್ಧೆ, ವಂದೇಮಾತರಂ ಗೀತೆ ಗಾಯನ, ಆಶುಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅನಂತ ಉತ್ಸವದ ಸಂಜೆ 6 ಗಂಟೆಗೆ ನಡೆದ ಸಭಾ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಎಲ್ಲಾ ಸ್ಪರ್ಧಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.



ನಂತರ ಶಿರಗುಪ್ಪದ ಶ್ರೀ ವಿವೇಕಾನಂದ ಯೋಗ ಮತ್ತು ಮಲ್ಲಕಂಭ ತರಬೇತಿ ಕೇಂದ್ರದ ಸುಮಾರು 30 ಮಕ್ಕಳು ಪ್ರದರ್ಶಿಸಿದ ಮಲ್ಲಕಂಭ ಮತ್ತು ಹಗ್ಗದ ಮೂಲಕ ಆಸನಗಳ ಪ್ರದರ್ಶನವು ಪ್ರೇಕ್ಷಕರ ಮನಸೂರೆಗೊಂಡಿತು.

ಈ ವಾರ್ಷಿಕೋತ್ಸವ ಕಾರ್ಯಕ್ರಮವು ಎಲ್ಲರ ಪಾಲಿಗೂ ಅತ್ಯಂತ ಸ್ಫೂರ್ತಿದಾಯಕವಾಗಿದ್ದು, ಅನಂತಕುಮಾರ್ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೂ ಹಂಚುವಲ್ಲಿ ಇನ್ನೊಂದು ಮಹತ್ವದ ಹೆಜ್ಜೆಯಾಗಿದೆ.





# ಅನಂತ ಉತ್ಸವದಲ್ಲಿ ಗಣ್ಯರಿಂದ ಅನಂತ ಸ್ಮರಣೆ :



"ನಾನು ರಾಜಕೀಯಕ್ಕೆ ಬರಲು ರಾಮಕೃಷ್ಣ ಹೆಗಡೆಯವರೇ ಕಾರಣ. ಅವರ ನಿಧನದ ನಂತರ, ಶ್ರೀ ಅನಂತಕುಮಾರ್ ಅವರು ನಮ್ಮನ್ನು ಬಿಜೆಪಿಗೆ ಕರೆತಂದರು. ಬೀದರ್‌ನಿಂದ ದಾವಣಗೆರೆಯವರೆಗೂ ಉತ್ತರ ಕರ್ನಾಟಕದಲ್ಲಿ ಬಿಜೆಪಿಯನ್ನು ಬಲಪಡಿಸುವಲ್ಲಿ ಅವರ ಪಾತ್ರ ಮಹತ್ವದ್ದು. ಶ್ರೀ ಅನಂತಕುಮಾರ್ ಅವರು ಕೇವಲ ರಾಜಕಾರಣಿಯಾಗಿರಲಿಲ್ಲ; ಅವರು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ನಿಜವಾದ ಜನನಾಯಕರಾಗಿದ್ದರು."

-ಗೋವಿಂದ ಕಾರಜೋಳ, ಲೋಕಸಭಾ ಸಂಸದರು ಚಿತ್ರದುರ್ಗ

"ಶ್ರೀ ಅನಂತಕುಮಾರ್ ಅವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಅವರು ಪಕ್ಷದ ಸಂಘಟನೆಗೆ ಹೆಚ್ಚಿನ ಒತ್ತು ನೀಡಿದ್ದರು. ಅವರು ಯಾವುದೇ ಊರಿಗೆ ಹೋದರೂ ಕಾರ್ಯಕರ್ತರ ಹೆಸರನ್ನು ಹಿಡಿದು ಕರೆಯುವಷ್ಟು ಅಪಾರವಾದ ನೆನಪಿನ ಶಕ್ತಿಯನ್ನು ಹೊಂದಿದ್ದರು. ಅವರು ಒಬ್ಬ ಅತ್ಯುತ್ತಮ ಸಂಘಟಕರಾಗಿದ್ದರು. ಅವರು ನಮ್ಮೊಂದಿಗೆ ಇದ್ದಿದ್ದರೆ ಕರ್ನಾಟಕಕ್ಕೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ."

- ವೀರಣ್ಣ ಚರಂತಿಮಠ, ಮಾಜಿ ಶಾಸಕರು, ಬಾಗಲಕೋಟೆ





"ಅನಂತಕುಮಾರ್ ಅವರ ನಾಯಕತ್ವದಲ್ಲಿಯೇ ನಾವೆಲ್ಲರೂ ಬೆಳೆದು ನಾಯಕರಾದೆವು. ಅವರು ನಮ್ಮನ್ನು ಕಾರ್ಯಕರ್ತರಾಗಿ ಗುರುತಿಸಿ, ಪ್ರತಿಯೊಂದು ಹಂತದಲ್ಲೂ ಮಾರ್ಗದರ್ಶನ ನೀಡಿ ನಾಯಕರನ್ನಾಗಿ ರೂಪಿಸಿದರು. ಅವರ ಜೀವನ ನಮಗೆಲ್ಲರಿಗೂ ಎಂದಿಗೂ ಮಾದರಿ."

-ಮಹೇಶ್ ತೆಂಗಿನಕಾಯಿ, ಶಾಸಕರು ಹುಬ್ಬಳ್ಳಿ -ಧಾರವಾಡ ಕೇಂದ್ರ

"ಅನಂತಕುಮಾರ್ ಅವರು ನನ್ನ ಪರಮಾಪ್ತ ಸ್ನೇಹಿತರಾಗಿದ್ದರು. ಅವರು ರಾಜ್ಯ ಕಂಡ ಅತ್ಯುತ್ತಮ ಸಂಸದೀಯ ಪಟುಗಳಲ್ಲಿ ಒಬ್ಬರು. ಗುರು-ಹಿರಿಯರ ಬಗ್ಗೆ ಅವರಿಗೆ ಅಪಾರ ಪ್ರೀತಿ ಮತ್ತು ವಿಶ್ವಾಸವಿತ್ತು. ಅನಂತಕುಮಾರ್ ಅವರು ಇಂದು ನಮ್ಮೊಂದಿಗೆ ಇದ್ದಿದ್ದರೆ, ರಾಜ್ಯದ ಮತ್ತು ದೇಶದ ರಾಜಕೀಯ ಚಿತ್ರಣವೇ ಬೇರೆಯಾಗಿರುತ್ತಿತ್ತು. ಅವರ ಸ್ಮರಣೆಗಾಗಿ ಸ್ಥಾಪಿಸಿರುವ 'ಅನಂತ ಪ್ರೇರಣಾ ಕೇಂದ್ರ'ವು ದೇಶದಲ್ಲೇ ಮೊದಲ ರೀತಿಯ ಚಿತ್ರಸಂಗ್ರಹಾಲಯವಾಗಿದೆ. ಈ ಕೇಂದ್ರವು ಅನಂತಕುಮಾರ್ ಅವರ ಜೀವನ ಮತ್ತು ಸಾಧನೆಗಳನ್ನು ಜನರಿಗೆ ಪರಿಚಯಿಸುವ ಒಂದು ಅದ್ಭುತ ಸ್ಥಳವಾಗಿದೆ. ಇದು ಯುವ ಪೀಳಿಗೆಗೆ ಪ್ರೇರಣೆಯ ಚಿಲುಮೆಯಾಗಿದ್ದು, ಅವರ ಆದರ್ಶಗಳನ್ನು ತಿಳಿಸುತ್ತದೆ."

-ರಮೇಶ್ ಜಿಗಜಿಣಗಿ , ಮಾಜಿ ಕೇಂದ್ರ ಸಚಿವರು ಹಾಗೂ ಸಂಸದರು ವಿಜಯಪುರ






"ಅನಂತಕುಮಾರ್ ಅವರು ಅಪಾರ ಜ್ಞಾನ ಭಂಡಾರವನ್ನೇ ಹೊಂದಿದ್ದರು. 2004ರಲ್ಲಿ ಅವರ ನೇತೃತ್ವದಲ್ಲಿ ನಾವು ಜನತಾದಳ ತೊರೆದು ಬಿಜೆಪಿಯನ್ನು ಸೇರಿದೆವು. ಅವರಲ್ಲಿ ಪ್ರತಿಯೊಂದು ವಿಷಯದ ಬಗ್ಗೆಯೂ ಆಳವಾದ ತಿಳುವಳಿಕೆ ಇತ್ತು. ಯಾವ ವಿಚಾರವನ್ನು ಹೇಗೆ ಮತ್ತು ಯಾವಾಗ ಪ್ರಸ್ತಾಪಿಸಬೇಕೆಂದು ಅವರಿಗೆ ತಿಳಿದಿತ್ತು. ನಾವು ಇಂದು ರಾಜಕೀಯದಲ್ಲಿ ಗುರುತಿಸಿಕೊಂಡಿದ್ದರೆ ಅದರ ಹಿಂದೆ ಅನಂತಕುಮಾರ್ ಅವರ ಮಾರ್ಗದರ್ಶನವಿದೆ."

- ಶ್ರೀ ಶಿವಕುಮಾರ್ ಉದಾಸಿ, ಮಾಜಿ ಸಂಸದರು

"ಅನಂತಕುಮಾರ್ ಅವರ ಜೀವನವೇ ನಮಗೆ ಪ್ರೇರಣೆ. ಅವರ ಸ್ನೇಹಮಯಿ ವ್ಯಕ್ತಿತ್ವ, ಅವರ ಸರಳ ಜೀವನಶೈಲಿ, ಮತ್ತು ಅವರು ಕಾರ್ಯಕರ್ತರನ್ನು ಬೆಳೆಸಿದ ವಿಧಾನ - ಇವೆಲ್ಲವೂ ನಮಗೆ ಸಾಮಾಜಿಕ ಕೆಲಸ ಮಾಡಲು ನಿಜಕ್ಕೂ ಸ್ಫೂರ್ತಿದಾಯಕವಾಗಿವೆ. ಪ್ರತಿಯೊಬ್ಬ ಕಾರ್ಯಕರ್ತರಿಗೂ ಆತ್ಮವಿಶ್ವಾಸ ತುಂಬಿ ಬೆಳೆಸುವ ದೂರದೃಷ್ಟಿ ಈ ಎಲ್ಲಾ ಗುಣಗಳು ಅವರನ್ನು ಜನನಾಯಕನಾಗಿ ರೂಪಿಸಿದ್ದವು. ಅವರ ಸರಳತೆ ಮತ್ತು ಸಾಮಾನ್ಯ ಜನರೊಂದಿಗೆ ಬೆರೆಯುವ ಅವರ ರೀತಿ, ಸಾರ್ವಜನಿಕ ಜೀವನದಲ್ಲಿ ಹೇಗೆ ಇರಬೇಕು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

- ಹನುಮಂತರಾಯಪ್ಪ , ದೊಡ್ಡಬಳ್ಳಾಪುರ , ರೇಷ್ಮೆಮಂಡಳಿ ಮಾಜಿ ಅಧ್ಯಕ್ಷರು



ವ್ಯಕ್ತಿ ವಿಶೇಷ ಮಾಲಿಕೆ

# ಭೂಸೇನೆಯ ಆತ್ಮ- ಜನರಲ್ ತಿಮ್ಮಯ್ಯ

- ಕೆ. ಜನಾರ್ದನ ತುಂಗ



**೧೯೪೭**ರಲ್ಲಿ ಭಾರತ ದೇಶವು ಇಬ್ಭಾಗವಾಗಿ ಪಾಕಿಸ್ತಾನದ ಉದಯವಾಯಿತು. ಕಾಶ್ಮೀರದ ಪ್ರಶ್ನೆ ಇನ್ನೂ ಬಗೆಹರಿದಿರಲಿಲ್ಲ. ಪರಿಸ್ಥಿತಿಯ ಲಾಭ ಪಡೆಯಲು ದುರುಳ ಪಾಕಿಸ್ತಾನಿ ಸೈನ್ಯ ಮುಂದಾಯಿತು. ೦೨/೧೧/೧೯೪೭ರಂದು ಪಾಕಿಸ್ತಾನದ ಧ್ವಜ ಗಿಲ್ಗಿಟ್ ಮೇಲೆ ಹಾರಾಡತೊಡಗಿತು. ಜೊತೆಗೆ ಸೈನ್ಯವು ಬುಡಕಟ್ಟು ಜನಾಂಗದ ಸಾವಿರಾರು ಜನರನ್ನು ಕಾಶ್ಮೀರದ ಒಳಕ್ಕೆ ನುಗ್ಗಿಸಿತು. ೧೯೪೮ರ ಮೇ ತಿಂಗಳ ಹೊತ್ತಿಗೆ ಪಾಕಿಸ್ತಾನದ ಸೇನೆ ದೇವಸಾಯ್ ಪರ್ವತವನ್ನು ದಾಟಿ ಕಾರ್ಗಿಲ್ ಮತ್ತು ಡ್ರಾಸ್ ಪಟ್ಟಣಗಳನ್ನು ವಶಪಡಿಸಿಕೊಂಡಿತು. ಅಗಸ್ಟ್ ೧೪ರಂದು ಲಡಾಕಿನ ಲೇಹ್ ನಗರಕ್ಕೆ ಸಮೀಪದ ಸ್ಕರ್ಡು ಕೂಡ ಪಾಕಿಸ್ತಾನಿಗಳ ವಶವಾಯಿತು. ಲೇಹ್ ನಗರವನ್ನು ಪಾಕ್ ಸೇನೆ ಸುತ್ತುವರಿದಿದ್ದು ಅಲ್ಲಿದ್ದ ಪುಟ್ಟ ಸೈನ್ಯಕ್ಕೆ ಶತ್ರುಗಳನ್ನು ಎದುರಿಸುವ ಶಕ್ತಿಯಿರಲಿಲ್ಲ. ಕಾಶ್ಮೀರ ಕಣಿವೆಯನ್ನು ಪ್ರವೇಶಿಸಲು ಇದ್ದ ಮಾರ್ಗ ಝೋಜಿಲಾ ಪಾಸ್ ಕೂಡ ಶತ್ರುಗಳ ವಶವಾಗಿದ್ದುದು ಭಾರತೀಯ ಸೈನ್ಯಕ್ಕೆ ಚಿಂತೆಯ ವಿಷಯವಾಗಿತ್ತು.

ಲಡಾಕ್ ಮತ್ತು ಕಾಶ್ಮೀರ ಕಣಿವೆಯನ್ನು ಉಳಿಸಿಕೊಳ್ಳಲು ಝೋಜಿಲಾ ಪಾಸ್ ಮರಳಿ ಕೈವಶವಾಗಲೇ ಬೇಕಿತ್ತು. ಇದಕ್ಕಿದ್ದ ಒಂದೇ ದಾರಿ, ಶಿವನ ನೆಲೆ ಎಂದು ಹೇಳುವ ಝೋಜಿಲಾ ಪರ್ವತದ ಮೇಲಿನಿಂದ ಪಾಕ್ ಸೇನೆಯ ಮೇಲೆ ಆಕ್ರಮಣ ಮಾಡುವುದು. ಆದರೆ ಆ ಪರ್ವತದ ಎತ್ತರ ೧೧೫೭೫ ಅಡಿಗಳು! ಅಷ್ಟು ಎತ್ತರಕ್ಕೆ ಸೈನಿಕರನ್ನು ಕಾಲ್ನಡಿಗೆಯಿಂದ ಹತ್ತಿಸುವುದು ಅಸಾಧ್ಯ. ಹೀಗಾಗಿ ಟ್ಯಾಂಕ್‌ಗಳನ್ನು ಬಳಸಿ ದಾಳಿನಡೆಸುವುದೆಂದು ಸೇನಾಧಿಕಾರಿ ನಿರ್ಧರಿಸಿದರು. ಜೀಪು ಕೂಡ ಮೇಲೆ ಹತ್ತಲು ಹರಸಾಹಸ ಪಡುವ ಪಾಳುಮಾರ್ಗದಲ್ಲಿ ಟ್ಯಾಂಕುಗಳು ಹತ್ತುವುದಾದರೂ ಹೇಗೆ? ಸೇನಾಧಿಕಾರಿಯ ತಲೆ ಮಿಂಚಿನ ವೇಗದಲ್ಲಿ ನಿರ್ಧರಿಸಿತು. "ಟ್ಯಾಂಕಿನ ಬಿಡಿಭಾಗಗಳನ್ನು ಬಿಚ್ಚಿ ಪರ್ವತದ ತುದಿಗೆ ಸಾಗಿಸಿ" ಎಂದು ಅವರು ಆದೇಶ ನೀಡಿದರು. ಅದರಂತೆ ಟ್ಯಾಂಕುಗಳನ್ನು ಬಿಚ್ಚಿ ಬಿಡಿಭಾಗಗಳನ್ನು ಜೀಪುಗಳ ಮೇಲೆ ಪರ್ವತದ ತುದಿಗೆ ಸಾಗಿಸಿ ಅಲ್ಲಿ ಮತ್ತೆ ಜೋಡಿಸಲಾಯಿತು. ಇದಕ್ಕಾಗಿ ಹೇಸರಗತ್ತೆಗಳ ಮಾರ್ಗದಲ್ಲಿ ಜೀಪ್ ಓಡಿಸಲಾಗಿತ್ತು ಎಂಬುದನ್ನು ತಿಳಿದರೆ ಭಾರತೀಯ ಸೈನಿಕರ ಸಾಹಸ ಮೈನವಿರೇಳಿಸುತ್ತದೆ. ೧೧೫೭೫ ಸಾವಿರ ಅಡಿಗಳ ಮೇಲಿನಿಂದ ಭಾರತೀಯ ಸೈನ್ಯದ ರುದ್ರತಾಂಡವದ ಸದ್ದಿಗೆ ಪಾಕ್ ಸೈನ್ಯ ಬೆಚ್ಚಿಬಿದ್ದಿತು; ಕಾಲಿಗೆ ಬುದ್ಧಿ ಹೇಳಿತು(೦೧/೧೧/೧೯೪೮). ಕಾಶ್ಮೀರ ಕಣಿವೆ, ಲಡಾಖ್ ಪ್ರದೇಶಗಳು ಭಾರತದಲ್ಲಿಯೇ ಉಳಿದುಕೊಂಡವು. ಕಾರ್ಗಿಲ್, ಡ್ರಾಸ್, ಸ್ಕರ್ಡುಗಳೂ ಮರಳಿ ಕೈವಶವಾದವು.

ಜಗತ್ತಿನ ಅತ್ಯಂತ ಎತ್ತರ ಪ್ರದೇಶದಿಂದ ನಡೆದ ಆಪರೇಶನ್ ಬೈಸನ್ ಎಂದು ಹೆಸರಾದ ಯುದ್ಧದಲ್ಲಿ ಭಾಗವಹಿಸಿದ ಭಾರತೀಯ ಪದಾತಿದಳದ ನೇತೃತ್ವ ವಹಿಸಿದವರು, ಕೊಡಗಿನ ಕಲಿ, ಕೊಡಂದೆರ ಸುಬ್ಬಯ್ಯ ತಿಮ್ಮಯ್ಯ. ಮುಂದೆ ೧೯೫೭ರಿಂದ ೧೯೬೧ರ ವರೆಗೆ ಮಹಾದಂಡನಾಯಕರಾಗಿ ಭಾರತೀಯ ಭೂಸೇನೆಯನ್ನು ಮುನ್ನಡೆಸಿದವರು.

ಸೋಲ್ ಸಾವರಿಯದ ಕಲಿಗಳ ನಾಡು, ಕೊಡಗಿನ ಮಡಿಕೇರಿಯಲ್ಲಿ ಪ್ರತಿಷ್ಠಿತ ಕೊಡಂದೆರ ಮನೆತನದಲ್ಲಿ ತಿಮ್ಮಯ್ಯನವರ ಜನನವಾಯಿತು (೩೧/೦೩/೧೯೦೬). ಅವರ ತಂದೆ ತಿಮ್ಮಯ್ಯ, ತಾಯಿ ಸಾರ್ವಜನಿಕ ಸೇವೆಗಾಗಿ ಕೈಸರ್-ಎ-ಹಿಂದ್ ಗೌರವಾನ್ವಿತ ಸಮಾಜಸೇವಕಿ ಚೆಪ್ಪುಡಿರ ಸೀತಮ್ಮ. (ಮುಂದೆ ೧೯೩೫ರಲ್ಲಿ ಪತ್ನಿ, ನೀನಾ ತಿಮ್ಮಯ್ಯ ಕೂಡ ಕೈಸರ್-ಎ-ಹಿಂದ್ ಪ್ರಶಸ್ತಿಗೆ ಪಾತ್ರರಾದರು) ಮೊದಲಿಗೆ ಕೂನೂರಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ನಂತರ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ತಿಮ್ಮಯ್ಯ ಮಿಲಿಟರಿ ತರಬೇತಿಗಾಗಿ ಪ್ರಿನ್ಸ್ ಆಫ್ ವೇಲ್ಸ್ ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜನ್ನು ಸೇರಿಕೊಂಡರು. ನಂತರ, ಹೆಚ್ಚಿನ ತರಬೇತಿಗಾಗಿ ಸಾಂಡ್‌ಹರ್ಸ್ಟ್ ರಾಯಲ್ ಮಿಲಿಟರಿ ಕಾಲೇಜನ್ನು ಸೇರಿದರು.

ತರಬೇತಿಯನ್ನು ಮುಗಿಸಿ ೦೪/೦೨/೧೯೨೬ರಂದು ಭಾರತೀಯ ಸೇನೆಯಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ಭರ್ತಿಯಾದರು. ಅಲ್ಲಿಂದ ತಮ್ಮ ಧೈರ್ಯ, ಸಾಹಸ, ಯುದ್ಧತಂತ್ರಗಳ ಪರಿಣತಿಗಳಿಂದಾಗಿ ಹಂತಹಂತವಾಗಿ ಮೇಲೇರುತ್ತ ೦೭/೦೫/೧೯೫೭ರಲ್ಲಿ ಭೂಸೇನೆಯ ಮಹಾ ದಂಡನಾಯಕರಾಗಿ ಆಯ್ಕೆಯಾದರು. ೦೭/೦೫/೧೯೬೧ರಂದು ನಿವೃತ್ತರಾದರು. ತಿಮ್ಮಯ್ಯನವರ ಜೀವನಗಾಥೆಯನ್ನು ಸಂಕ್ಷಿಪ್ತವಾಗಿ ವಿವರಿಸುವುದು ಕಷ್ಟ. ಅವರು ೧೯೨೭ರಿಂದ ೧೯೩೦ರ ವರೆಗೆ ಉತ್ತರ ಪಶ್ಚಿಮ ಗಡಿನಾಡು ಪ್ರಾಂತ (NWFP) ದಲ್ಲಿ ಸೇವೆ ಸಲ್ಲಿಸಿದರು. ೧೯೩೫ರಲ್ಲಿ ನೀನಾ ಕಾರ್ಯಪ್ಪರನ್ನು ಮದುವೆಯಾಗಿ ಕ್ವೆಟ್ಟಾದಲ್ಲಿ ನೆಲೆಸಿದ್ದರು. ಮದ್ರಾಸಿನಲ್ಲಿ ಕೆಲವು ವರ್ಷ ಸೇವೆ ಸಲ್ಲಿಸಿದ ನಂತರ ಅವರನ್ನು ಸಿಂಗಾಪುರದಲ್ಲಿ ನಿಯೋಜಿಸಲಾಯಿತು. ಅಲ್ಲಿಯೇ ಅವರು ಮೇಜರ್ ಪದವಿಗೆ ಬಡ್ತಿ ಪಡೆದರು. ಸಿಂಗಾಪುರದಲ್ಲಿ ಜಪಾನೀ ಸೈನ್ಯದ ಶರಣಾಗತಿ ಪ್ರಕ್ರಿಯೆಯ ಉಸ್ತುವಾರಿ ವಹಿಸಿದವರು, ತಿಮ್ಮಯ್ಯ.

ಎರಡನೇ ಮಹಾಯುದ್ಧದ ನಂತರ ಬ್ರಿಟಿಷ್ ಕಾಮನ್ವೆಲ್ತ್ ಸ್ವಾಧೀನತಾ ದಳದ ಬ್ರಿಗೇಡಿಯರ್ ಆಗಿ ಅಧಿಕಾರ ನೀಡಲಾಗಿತ್ತು. ಈ ಅಧಿಕಾರ ಗಳಿಸಿದ ಏಕೈಕ ಭಾರತೀಯ, ತಿಮ್ಮಯ್ಯ! ಬರ್ಮಾದೇಶವನ್ನು ಆಕ್ರಮಿಸಿದ್ದ ಜಪಾನೀಯರನ್ನು ಹಿಮ್ಮೆಟ್ಟಿಸುವಲ್ಲಿ ತಿಮ್ಮಯ್ಯ ಪ್ರಮುಖ ಪಾತ್ರವನ್ನು ವಹಿಸಿದ್ದಲ್ಲದೆ ಟೋಕಿಯೋ ನಗರದಲ್ಲಿ ಜಪಾನಿನ ಚಕ್ರವರ್ತಿಯ ಅರಮನೆಯಲ್ಲಿ ಬ್ರಿಟಿಷರ ಆದೇಶವನ್ನು ಪಾಲಿಸಲು ನಿರಾಕರಿಸಿ ಮುಷ್ಕರ ಹೂಡಿದ್ದ ರಾಯಲ್ ಗೂರ್ಖಾ ರೈಫಲ್ಸ್ ಸೈನಿಕರ ಮನವೊಲಿಸಿ ಪರಿಸ್ಥಿತಿ ತಿಳಿಗೊಳಿಸಿದರು. ೧೯೪೭ರಲ್ಲಿ ದೇಶ ಇಬ್ಭಾಗವಾದಾಗ ಸೇನೆಯ ಶಸ್ತ್ರಾಸ್ತ್ರಗಳೂ ಭಾಗವಾಗಬೇಕಿತ್ತು. ತಮ್ಮ ಪ್ರಾಮಾಣಿಕತೆಯಿಂದ ಇಡೀ ಸೇನೆಯ ವಿಶ್ವಾಸ ಗಳಿಸಿದ್ದ ತಿಮ್ಮಯ್ಯನವರಿಗೆ ಈ ಗುರುತರ ಜವಾಬ್ದಾರಿಯನ್ನು ವಹಿಸಲಾಗಿತ್ತು. ಅವರು ಅದನ್ನು ಯಶಸ್ವಿಯಾಗಿ ನಿರ್ವಹಿಸಿದರು.

೦೧/೦೧/೧೯೫೦ರಂದು ಮೇಜರ್ ಜನರಲ್ ಆಗಿ ಬಡ್ತಿಪಡೆದ ತಿಮ್ಮಯ್ಯ, ಡೆಹ್ರಾಡೂನಿನ ಮಿಲಿಟರಿ ಅಕಾಡೆಮಿಯ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸಿದರು. ೧೯೫೧ರಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ "ತಟಸ್ಥ ರಾಷ್ಟ್ರಗಳ ವಾಪಸಾತಿ ಕಮಿಶನ್ (NNRC)" ಮುಖ್ಯಸ್ಥರಾಗಿ ಕೊರಿಯಾ ಸಮಸ್ಯೆಯನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳು ಮೆಚ್ಚುವಂತೆ ಬಗೆಹರಿಸಿದರು. ಅವರ ಅದುವರೆಗಿನ ಸೇವೆಯನ್ನು ಗುರುತಿಸಿದ ದೇಶ ಪದ್ಮಭೂಷಣ ಪ್ರಶಸ್ತಿಯ ಮೂಲಕ ಅವರನ್ನು ಗೌರವಿಸಿತು.

ಭೂಸೇನೆಯ ದಂಡನಾಯಕರಾಗಿ ತಿಮ್ಮಯ್ಯ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಚೀನಾ ದೇಶದ ಕುರಿತು ಭಾರತ ಸರಕಾರದ ಧೋರಣೆಯನ್ನು ಸಂದೇಹದಿಂದಲೇ ನೋಡಿದ ತಿಮ್ಮಯ್ಯ ಸೇನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸಲಹೆ ನೀಡಿದ್ದರು. ಆದರೆ, ರಕ್ಷಣಾ ಸಚಿವ, ವಿ. ಕೆ. ಮೆನನ್ ಸಲಹೆಯನ್ನು ನಿರ್ಲಕ್ಷಿಸಿದ್ದಲ್ಲದೆ ಸೇನೆಯ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದರು. ಇದನ್ನು ಪ್ರತಿಭಟಿಸಿ ಪ್ರಧಾನಿ ನೆಹರೂ ಅವರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಅವರನ್ನು ಬೆಂಬಲಿಸಿ ವಾಯು ಮತ್ತು ನೌಕಾದಳದ ದಂಡನಾಯಕರೂ ರಾಜೀನಾಮೆ ಸಲ್ಲಿಸಿದರು. ರಾಜೀನಾಮೆಗಳನ್ನು ನೆಹರೂ ಅಂಗೀಕರಿಸಲಿಲ್ಲ, ಆದರೆ ಸೇನೆಯ ಸಮಸ್ಯೆಗಳ ಬಗ್ಗೆಯೂ ಗಮನ ಹರಿಸಲಿಲ್ಲ. ಇದರಿಂದಾಗಿ ನೊಂದಿದ್ದ ತಿಮ್ಮಯ್ಯ ತಮ್ಮ ವಿದಾಯದ ಸಂದೇಶದಲ್ಲಿ "ನಾನು ನಿಮ್ಮನ್ನು ಚೀನೀ ಸೈನ್ಯದ ಫಿರಂಗಿಗಳಿಗೆ ಆಹಾರವಾಗಿಸಿ ಬಿಟ್ಟು ಹೋಗುತ್ತಿಲ್ಲವೆಂದು ಆಶಿಸುತ್ತಿದ್ದೇನೆ, ದೇವರು ನಿಮ್ಮನ್ನು ಕಾಪಾಡಲಿ" ಎಂದು ಹೇಳಿದ್ದರು. ಮುಂದೆ ಒಂದೇ ವರ್ಷದಲ್ಲಿ ಅವರ ಆತಂಕ ನಿಜವಾದದ್ದು ಇತಿಹಾಸ!

ನಿವೃತ್ತಿಯ ನಂತರ ವಿಶ್ವಸಂಸ್ಥೆಯ ಶಾಂತಿಪಾಲನಾ ದಳದ ಕಮಾಂಡರ್ ಆಗಿ ನಿಯೋಜಿತರಾದ ತಿಮ್ಮಯ್ಯ, ಸೈಪ್ರಸ್‌ನಲ್ಲಿ ೧೮/೧೨/೧೯೬೫ರಂದು ಹೃದಯಾಘಾತದಿಂದ ನಿಧನರಾದರು. ಪ್ರಖರ ಸ್ವಾಭಿಮಾನಿ, ಸ್ವಾತಂತ್ರ್ಯಪ್ರೇಮಿ, ರಾಷ್ಟ್ರಪ್ರೇಮಿಯಾಗಿದ್ದ ತಿಮ್ಮಯ್ಯ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಸಹಾನುಭೂತಿ ಹೊಂದಿದ್ದರು. ಒಂದು ಸಮಯದಲ್ಲಿ ಸೇನೆಯನ್ನು ತ್ಯಜಿಸಿ ಚಳವಳಿಯಲ್ಲಿ ಭಾಗವಹಿಸಬೇಕೆಂದು ನಿರ್ಧರಿಸಿದ್ದರು. ಆಗ ದೇಶ ಮುಂದೆ ಸ್ವತಂತ್ರವಾದಾಗ ಸಮರ್ಥ ಸೇನಾ ಪ್ರಮುಖರ ಅಗತ್ಯವಿದೆ, ಆದುದರಿಂದ ರಾಜೀನಾಮೆ ನೀಡಬೇಡಿ ಎಂದು ಮೋತೀಲಾಲ್ ನೆಹರೂ ಅವರನ್ನು ತಡೆದಿದ್ದರು.

ತಮ್ಮ ಸೇವಾವಧಿಯಲ್ಲೇ ಪದ್ಮಭೂಷಣ, ಜನರಲ್ ಸರ್ವೀಸ್ ಮೆಡಲ್, ಭಾರತೀಯ ಸ್ವಾತಂತ್ರ್ಯ ಪದಕ, ವಿಶಿಷ್ಟ ಸೇವಾ ಆರ್ಡರ್ (DSO), ಬರ್ಮಾಸ್ಟಾರ್ ಮುಂತಾದ ಅನೇಕ ಪದಕ, ಪ್ರಶಸ್ತಿಗಳನ್ನು ಗಳಿಸಿದ ತಿಮ್ಮಯ್ಯನವರ ಹೆಸರನ್ನು ಬೆಂಗಳೂರು, ಮೈಸೂರು ಮತ್ತು ಸೈಪ್ರಸ್ ದೇಶದ ಲಾರ್ನಾಕದಲ್ಲಿ ರಸ್ತೆಗಳಿಗೆ ಇಡಲಾಗಿದೆ. ಸೈಪ್ರಸ್ ದೇಶ ಅವರ ಸೇವೆಯನ್ನು ಗೌರವಿಸಿ ವಿಶೇಷ ಅಂಚೆಚೀಟಿಯನ್ನೂ ಹೊರಡಿಸಿದೆ. ಮಡಿಕೇರಿಯಲ್ಲಿರುವ ಅವರು ಹುಟ್ಟಿದ ಮನೆ "ಸನ್ನಿ ಸೈಡ್" ತಿಮ್ಮಯ್ಯನವರ ಸ್ಮಾರಕ ಮ್ಯೂಸಿಯಂ ಆಗಿದ್ದು ದೇಶಪ್ರೇಮಿ ಯುವಕರನ್ನು ಕೈಬೀಸಿ ಕರೆಯುತ್ತಿದೆ.

ಲೆಫ್ಟಿನೆಂಟ್ ಜನರಲ್ ಪ್ರೇಮೇಂದ್ರ ಸಿಂಗ್ ಭಗತ್ ಹೇಳಿರುವಂತೆ "ಜನರಲ್ ತಿಮ್ಮಯ್ಯ ಪ್ರತಿಯೊಂದು ತಲೆಮಾರಿನಲ್ಲಿಯೂ ಹುಟ್ಟುವುದಿಲ್ಲ. ಅವರಂಥವರು ಸೈನಿಕರಾಗುವುದೂ ಅಪರೂಪ. ಅವರು ತನ್ನ ಸೈನಿಕರ ಮಿತ್ರ, ಭೂಸೇನೆಯು ಅವರ ಆತ್ಮ ಮತ್ತು ಅವರು ಸೇನೆಯ ಆತ್ಮ." ಇಂತಹ ಮಹಾನ್ ಸೇನಾನಿಯ ಜೀವನದ ಕೆಲಕ್ಷಣಗಳನ್ನು ಮಾತ್ರ ಈ ಲೇಖನದಲ್ಲಿ ಹಿಡಿದಿರಿಸುವ ಪ್ರಯತ್ನ ಮಾಡಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಿರಿಯ ಬರಹಗಾರ ಶ್ರೀ ಟಿ ಎಸ್ ಗೋಪಾಲ್ ಬರೆದಿರುವ "ಜನರಲ್ ತಿಮ್ಮಯ್ಯ" ಕಿರುಪುಸ್ತಕವನ್ನು ಓದಬಹುದು.

# ಅದಮ್ಯ ಚೇತನದ ಅನಂತ ಪ್ಲೇಟ್ ಬ್ಯಾಂಕ್: ಪರಿಸರ ಸಂರಕ್ಷಣೆಯ ಪಯಣ ಮುಂದುವರಿದಿದೆ!





ಪ್ಲಾಸ್ಟಿಕ್ ಮುಕ್ತ ಭಾರತದ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಅದಮ್ಯ ಚೇತನ ಸಂಸ್ಥೆಯು ಮತ್ತಷ್ಟು ಬಲವಾದ ಹೆಜ್ಜೆಗಳನ್ನು ಇಟ್ಟಿದೆ. ಈಗಾಗಲೇ ಮೈಸೂರು, ಸಾಗರ, ಡೆಹ್ರಾಡೂನ್ ಮತ್ತು ಅಯೋಧ್ಯೆ ಮೊದಲಾದ 17 ನಗರಗಳಲ್ಲಿ ಯಶಸ್ವಿಯಾಗಿ ಅನಂತ ಪ್ಲೇಟ್ ಬ್ಯಾಂಕ್‌ಗಳನ್ನು ಸ್ಥಾಪಿಸಿರುವ ಸಂಸ್ಥೆಯು, ಮೇ ತಿಂಗಳಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ, ತೀರ್ಥಹಳ್ಳಿ, ಕೊಪ್ಪ ಮತ್ತು ಸೇಡಂ ತಾಲೂಕಿನ ಅಡಕಿ ಗ್ರಾಮದಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ. ಈ ಹೊಸ ಪ್ಲೇಟ್ ಬ್ಯಾಂಕ್‌ಗಳು ಆಯಾ ಪ್ರದೇಶಗಳಲ್ಲಿ ಪರಿಸರ ಸಂರಕ್ಷಣೆಯ ಕ್ರಾಂತಿಯನ್ನುಂಟುಮಾಡುವ ವಿಶ್ವಾಸವನ್ನು ಮೂಡಿಸಿವೆ.

**ಸೊರಬದಲ್ಲಿ ಅನಂತ ಪ್ಲೇಟ್ ಬ್ಯಾಂಕ್ :**

ಅದಮ್ಯ ಚೇತನ ಸಂಸ್ಥೆ ಬೆಂಗಳೂರು, ಶ್ರೀ ಮುರುಘಾ ಮಠ ಮತ್ತು ಸೊರಬದ ಪರಿಸರ ಜಾಗೃತಿ ಟ್ರಸ್ಟ್ ಸಹಯೋಗದಲ್ಲಿ ಮೇ 18 ರಂದು ಸೊರಬದ ಮುರುಘಾ ಮಠದ ಆವರಣದಲ್ಲಿ ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆಗೊಂಡಿತು. ಜಡೆ ಸಂಸ್ಥಾನ ಮಠದ ಮ. ನಿ. ಪ್ರ. ಡಾ.ಮಹಾಂತ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮ ನೆರವೇರಿತು. ಇದೇ ಸಂದರ್ಭದಲ್ಲಿ "ಪವಿತ್ರ ವನ" ಉದ್ಘಾಟನೆಗೊಂಡಿತು.

ಪಶ್ಚಿಮ ಘಟ್ಟಗಳು ಅಪಾರ ಅರಣ್ಯ ಸಂಪನ್ಮೂಲ ಹೊಂದಿವೆ. ಇಲ್ಲಿ ಅನೇಕ ಜೀವ ವೈವಿಧ್ಯ - ಪ್ರಾಣಿ ಸಂಕುಲಗಳು, ನದಿಗಳು ಉಗಮಗೊಂಡಿವೆ. ಪ್ಲಾಸ್ಟಿಕ್‌ನ ಅತಿಯಾದ ಬಳಕೆಯಿಂದ ಪಶ್ಚಿಮ ಘಟ್ಟಗಳ ಅಮೂಲ್ಯವಾದ ಜೀವವೈವಿಧ್ಯ ಮತ್ತು ನದಿಗಳ ಉಗಮ ಸ್ಥಾನಕ್ಕೆ ಅಪಾಯ ಉಂಟಾಗುತ್ತಿದೆ ಎಂದು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಕಳವಳ ವ್ಯಕ್ತಪಡಿಸಿದರು. ಅಪಾರ ಅರಣ್ಯ ಸಂಪತ್ತನ್ನು ಹೊಂದಿರುವ ಈ ಪ್ರದೇಶದಲ್ಲಿ ಪ್ಲಾಸ್ಟಿಕ್‌ನಿಂದ ಪ್ರಾಣಿಪಕ್ಷಿಗಳ ಸಂಕುಲಕ್ಕೆ ಹಾನಿಯಾಗುತ್ತಿದೆ. ಆದ್ದರಿಂದ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸಿ, ಕಸ ಮುಕ್ತ ಸಮಾಜವನ್ನು ನಿರ್ಮಿಸಲು ಪ್ರತಿಯೊಬ್ಬರೂ ಒಟ್ಟಾಗಿ ಕೈಜೋಡಿಸುವುದು ಅತ್ಯಗತ್ಯ ಎಂದು ಕರೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ, ಕೆ. ವೆಂಕಟೇಶ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅದಮ್ಯ ಚೇತನ ಟ್ರಸ್ಟಿ ಪ್ರದೀಪ್ ಓಕ್ ಅವರು "ಅನಂತ ಪ್ಲೇಟ್ ಬ್ಯಾಂಕ್"ನ ಉದ್ದೇಶಗಳು ಮತ್ತು ಅದರ ಮಹತ್ವದ ಕುರಿತು ವಿವರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸೊರಬ ಪರಿಸರ ಜಾಗೃತಿ ಟ್ರಸ್ಟ್ ನ ಅಧ್ಯಕ್ಷ ಎಂ ಆರ್ ಪಾಟೀಲ್, ಡಿ ಶಿವಯೋಗಿ, ಪಾಣಿ ರಾಜಪ್ಪ, ಚಕ್ರವಾಕ ಸುಬ್ರಹ್ಮಣ್ಯ, ಶ್ರೀಪಾದ್ ಬಿಚ್ಚುಗತ್ತಿ, ಶಿವಾನಂದ ಪಾಣಿ, ವಕೀಲ ನಾಗಪ್ಪ, ನಂದೀಶ್ ಗೌಡ, ಪೂರ್ಣಿಮಾ ಶಿವಯೋಗಿ, ಮೊದಲಾದ ಗಣ್ಯರು ಉಪಸ್ಥಿತರಿದ್ದರು.



**ತೀರ್ಥಹಳ್ಳಿಯ ಕಟ್ಟೆಹಕ್ಕಲು ಗ್ರಾಮದಲ್ಲಿ ಅನಂತ ಪ್ಲೇಟ್ ಬ್ಯಾಂಕ್:**

**ಕೊಪ್ಪದಲ್ಲಿ ಅನಂತ ಪ್ಲೇಟ್ ಬ್ಯಾಂಕ್ ಲೋಕಾರ್ಪಣೆ:**

ಕೊಪ್ಪದ ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ. ಮತ್ತು ಅದಮ್ಯ ಚೇತನ ಸಂಸ್ಥೆ ಕೈಜೋಡಿಸಿ, ಮೇ 19 ರಂದು ಸಂಸ್ಥೆಯ ಸಭಾಂಗಣದಲ್ಲಿ ಅನಂತ ಪ್ಲೇಟ್ ಬ್ಯಾಂಕ್‌ಗೆ ಚಾಲನೆ ನೀಡಿದವು. ಈ ಕಾರ್ಯಕ್ರಮದಲ್ಲಿ ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಮಂಗಳಾ ಪ್ರವೀಣ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅದಮ್ಯ ಚೇತನ ಟ್ರಸ್ಟ್‌ನ ಟ್ರಸ್ಟಿ ಶ್ರೀ ಪ್ರದೀಪ್ ಓಕ್ ಮತ್ತು ಸಂಘದ ಪ್ರಮುಖ ಪದಾಧಿಕಾರಿಗಳು, ಮೊದಲಾದ ಗಣ್ಯರು

**ತೀರ್ಥಹಳ್ಳಿಯ ಕಟ್ಟೆಹಕ್ಕಲು ಗ್ರಾಮದಲ್ಲಿ ಅನಂತ ಪ್ಲೇಟ್ ಬ್ಯಾಂಕ್:**

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕಟ್ಟೆಹಕ್ಕಲು ಗ್ರಾಮದಲ್ಲಿ ಗ್ರಾಮ ಅಭಿವೃದ್ಧಿ ಸಮಿತಿ ಮತ್ತು ಅದಮ್ಯ ಚೇತನ ಸಹಯೋಗದಲ್ಲಿ ಮೇ 19 ರಂದು ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆಗೊಂಡಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಉದ್ಘಾಟನೆ ನೆರವೇರಿಸಿದರು. ಈ ಕಾರ್ಯಕ್ರಮವು ಸ್ಥಳೀಯ ಸಮುದಾಯದ ಗಣ್ಯರು ಮತ್ತು ಪರಿಸರಾಸಕ್ತರ ಸಮ್ಮುಖದಲ್ಲಿ ಯಶಸ್ವಿಯಾಗಿ ಜರುಗಿತು.



**ಸೇಡಂ ತಾಲೂಕಿನ ಆಡಕಿ ಗ್ರಾಮದಲ್ಲಿ ಅನಂತ ಪ್ಲೇಟ್ ಬ್ಯಾಂಕ್:**

: ಸೇಡಂ ತಾಲೂಕಿನ ಆಡಕಿ ಗ್ರಾಮದಲ್ಲಿ 2025ರ ಮೇ 11ರಂದು ಪರಿಸರ ಸ್ನೇಹಿ ಉಪಕ್ರಮವಾದ ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆಗೊಂಡಿತು. ಇದನ್ನು ಅದಮ್ಯ ಚೇತನ ಮತ್ತು ಯುವ ಪ್ರೇರಣೆ ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ (ರಿ.) ಸಹಯೋಗದಿಂದ ಆರಂಭಿಸಲಾಯಿತು.

ಉದ್ಘಾಟನಾ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಜಂಟಿ ಕಾರ್ಯದರ್ಶಿ ಹಾಗೂ ಯುವ ಪ್ರೇರಣೆ ಸಂಸ್ಥೆಯ ಅಧ್ಯಕ್ಷರಾದ ಪ್ರಮೋದ್ ದೇಶಪಾಂಡೆ, ಬಿಜೆಪಿ ಮುಖಂಡರಾದ ಶ್ರೀ ಮುಕುಂದ್ ದೇಶಪಾಂಡೆ, ಡಾ. ಮುರಳೀಧರ್ ದೇಶಪಾಂಡೆ, ತ್ರಿವಿಕ್ರಮ್ ಜೋಶಿ, ಸಮುದಾಯದ ಮುಖಂಡರು, ಗ್ರಾಮಸ್ಥರು ಮೊದಲಾದವರು ಉಪಸ್ಥಿತರಿದ್ದರು.

ಈ ಅನಂತ ಪ್ಲೇಟ್ ಬ್ಯಾಂಕ್‌ನ ಆರಂಭದ ಮೊದಲ ಉಪಯೋಗವೇ ನರಸಿಂಹ ಜಯಂತಿ ಹಾಗೂ ವೆಂಕಟರಮಣ ದೇವಾಲಯದ ಉತ್ಸವದ ಸಂದರ್ಭದಲ್ಲಿ ಕಂಡುಬಂದಿತು. ಈ ಸಂದರ್ಭದಲ್ಲಿ ಪ್ರಸಾದ ವಿತರಣೆಗೆ ಪ್ಲಾಸ್ಟಿಕ್ ಬದಲಾಗಿ ಸ್ಟೀಲ್ ಪ್ಲೇಟ್‌ಗಳನ್ನು ಬಳಸಲಾಯಿತು. ಗ್ರಾಮಸ್ಥರು ಈ ಪರಿಸರ ಸ್ನೇಹಿ ಕ್ರಮವನ್ನು ಖುಷಿಯಿಂದ ಸ್ವಾಗತಿಸಿದರು.

# ಗ್ರಾಮೀಣ ಮಹಿಳೆಯರಿಗೆ ನೇತೃತ್ವ ವಿಕಸನ ಶಿಬಿರ




ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ 2025ರ ಮೇ 10ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಗ್ರಾಮ ಪಂಚಾಯತಿ ಸದಸ್ಯೆಯರು ಹಾಗೂ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ನೇತೃತ್ವ ವಿಕಸನಕ್ಕಾಗಿ ನಡೆದ "ಗ್ರಾಮ ಚೇತನ" ಶಿಬಿರ ಯಶಸ್ವಿಯಾಗಿ ಜರುಗಿತು. ಬ್ಯಾಹಟ್ಟಿ, ಕುಮಾರಕೊಪ್ಪ, ಉಗ್ಗಿನಕೇರಿ ಮತ್ತು ಶರೇವಾಡ ಗ್ರಾಮಗಳಿಂದ 32 ಮಹಿಳೆಯರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಶಿಬಿರದಲ್ಲಿ ಶ್ರೀ ಪ್ರಭಾಕರ ದೇಶಪಾಂಡೆ ಅವರು ನಾಯಕತ್ವ, ಸಬಲೀಕರಣ ಮತ್ತು ಸಂಘಟನೆಯ ಕುರಿತು ಮಾಹಿತಿ ನೀಡಿದರೆ, ಶ್ರೀಮತಿ ಮಾಳವಿಕಾ ಕಡಕೋಳ ಅವರು ಸ್ವಯಂ ಉದ್ಯಮ ಹಾಗೂ ಜೀವನ ಪಾಠಗಳ ಬಗ್ಗೆ ಪ್ರೇರಣಾತ್ಮಕವಾದ ಸಂದೇಶ ನೀಡಿದರು.

**ಹಸಿರುಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 487 ರಿಂದ 490ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು. 487, 488, 489, ಮತ್ತು 490 ಹಸಿರು ಭಾನುವಾರಗಳನ್ನು ಕ್ರಮವಾಗಿ, ಗವಿಪುರದ ಗಣೇಶ್ ಪಾರ್ಕ್ ಗವಿ ಗಂಗಾಧರೇಶ್ವರ ದೇವಸ್ಥಾನದ ಆವರಣ, ರಾಮನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಆವರಣ, ಬನಶಂಕರಿಯ ನಂದಿ ಎನ್‌ಕ್ಲೇವ್ ಅಪಾರ್ಟಮೆಂಟ್ ಆವರಣ, ಗವಿಪುರದ ಕಾರ್ತಿಕ ಕಲ್ಯಾಣ ಮಂಟಪದ ಆವರಣದಲ್ಲಿ ನಡೆಸಲಾಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

**ನಿತ್ಯ ಅನ್ನದಾನ :** ಅದಮ್ಯ ಚೇತನದಿಂದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ಜಯನಗರ, ಹುಬ್ಬಳ್ಳಿ, ಕಲಬುರಗಿ, ಜೋಧಪುರ ಮೊದಲಾದ ನಮ್ಮ ಎಲ್ಲಾ 8 ಕೇಂದ್ರಗಳಲ್ಲಿಯೂ ಅಗತ್ಯವಿರುವ ಜನರು ರುಚಿಕರವಾದ ಭೋಜನ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

**ರಾಮನಗರದಲ್ಲಿ ಹಸಿರು ಭಾನುವಾರ ಆಚರಣೆ:**

ರಾಮನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (NSS) ಘಟಕವು 2024-2025 ಶೈಕ್ಷಣಿಕ ವರ್ಷದ ವಿಶೇಷ ಶಿಬಿರವನ್ನು ಆಯೋಜಿಸಿತ್ತು. ಈ ಶಿಬಿರದ ಅಂಗವಾಗಿ, ಪರಿಸರ ಸಂರಕ್ಷಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶದಿಂದ ದಿನಾಂಕ ಮೇ 04, 2025 ರಂದು "ಸಸಿ ನೆಡುವ ಮತ್ತು ಅವುಗಳ ಸಂರಕ್ಷಣೆಯ ಅರಿವು" ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

## ತಿಂಗಳ ವರದಿ
### ( ಏಪ್ರಿಲ್ - ಮೇ 2025)

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶ್ರೀಮತಿ ತೇಜಸ್ವಿನಿ ಅವರು "ಹಸಿರೇ ಉಸಿರು" ಎಂಬ ವಿಷಯದ ಮೇಲೆ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ತಮ್ಮ ಉಪನ್ಯಾಸದಲ್ಲಿ, ಅವರು ಪರಿಸರದ ಮಹತ್ವ, ಮರಗಳ ಪಾತ್ರ, ಅರಣ್ಯನಾಶದ ದುಷ್ಪರಿಣಾಮಗಳು ಮತ್ತು ಅತಿಯಾದ ಪರಿಸರವನ್ನು ಸಂರಕ್ಷಿಸುವ ಅಗತ್ಯತೆಯ ಬಗ್ಗೆ ವಿವರಿಸಿದರು. ವಿದ್ಯಾರ್ಥಿಗಳು ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದನ್ನು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ತಮ್ಮ ಕೊಡುಗೆ ನೀಡಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದ ನಂತರ, ಅದಮ್ಯ ಚೇತನದ 488ನೇ ಹಸಿರು ಭಾನುವಾರದ ಕಾರ್ಯಕ್ರಮದ ಭಾಗವಾಗಿ ಕಾಲೇಜಿನ ಆವರಣದಲ್ಲಿ 53 ಗಿಡಗಳನ್ನು ನೆಡಲಾಯಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಪರಿಸರ ಕಾಳಜಿ ಮತ್ತು ಸಂರಕ್ಷಣೆಯ ಮಹತ್ವದ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.



**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ. ಶ್ರೀಚೇತನ ಸಭೆ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

## ಅಭಿನಂದನೆಗಳು

**ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕುರುಕ್ಷೇತ್ರ (NIT ಕುರುಕ್ಷೇತ್ರ) ಸಂಸ್ಥೆಯ ಆಡಳಿತ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಿಸಿ ಭಾರತದ ರಾಷ್ಟ್ರಪತಿಯವರು ಆದೇಶ ಹೊರಡಿಸಿದ್ದಾರೆ.**

ಅನಂತಪಥ

Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಮೇ 11 ರಂದು ಸದ್ಯೋಜಾತ ಆಯುರ್ವೇದ ಆರೋಗ್ಯ ಕೇಂದ್ರವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು.



ಸ್ವಾಮಿ ವಿವೇಕಾನಂದ ಗ್ರಾಮಾಂತರ ಪ್ರಥಮ ದರ್ಜೆ ಕಾಲೇಜಿನ 13ನೇ ಪದವಿ ಪ್ರದಾನ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು.



ಪ್ರಯೋಗ ಸಂಸ್ಥೆಯು 9 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗಾಗಿ ಸಂಶೋಧನಾಧಾರಿತ ಗಣಿತ ಉಪಕ್ರಮ 'ಧಾತು'ವನ್ನು ಅನಾವರಣಗೊಳಿಸಿತು. ಕಾರ್ಯಕ್ರಮದಲ್ಲಿ ಪ್ರೊ. ಅಭಯ್ ಕರಂಡಿಕರ್, ಪ್ರೊ. ಜೆಫ್ರಿ ಉಲ್ಮನ್ ಮತ್ತು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದ್ದರು.



ಇತ್ತೀಚೆಗೆ ಹೆಚ್.ಡಿ. ಅನುಸೂಯ ಮಂಜುನಾಥ್ ಅವರು ಅದಮ್ಯ ಚೇತನ ಅಡುಗೆ ಮನೆಗೆ ಭೇಟಿ ನೀಡಿ, ಅಲ್ಲಿನ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿದರು.



ಸಿಂಕ್ರೊನೊಸ್ ಟೆಕ್ನಾಲಜಿ (Synchronoss Technology) ಕಂಪನಿಯ ಸಿಬ್ಬಂದಿ ವರ್ಗದವರು ಇತ್ತೀಚೆಗೆ ಅದಮ್ಯ ಚೇತನದ ಅಡುಗೆಮನೆಯನ್ನು ವೀಕ್ಷಿಸಿದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಸಂಸ್ಥೆಯ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.



ವಿಜಯಪುರದ ಸಂಸದರಾದ ಶ್ರೀ ರಮೇಶ್ ಜಿಗಜಿಣಗಿ ಅವರು ಏಪ್ರಿಲ್ 27 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಚಿತ್ರ ಸಂಗ್ರಹಾಲಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಅದಮ್ಯ ಚೇತನದ 490ನೇ ಹಸಿರು ಭಾನುವಾರದ ಚಿತ್ರ. ವಾರಕ್ಕೊಮ್ಮೆ ನಡೆಯುವ ನಮ್ಮ ಗಿಡ ನೆಡುವ ಕಾರ್ಯಕ್ರಮದಲ್ಲಿ ಎಲ್ಲ ವರ್ಗದ ಜನರು ಸ್ವಯಂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.



ಅಯೋಧ್ಯೆಯಲ್ಲಿ ಅದಮ್ಯ ಚೇತನದಿಂದ ನಿರಂತರವಾಗಿ ನಡೆಯುತ್ತಿರುವ ಅನ್ನದಾನ ಸೇವೆ.

# ಅನಂತ ಚಿತ್ರಸಂಪುಟ

**2015 ಮತ್ತು 2016ರ ಸೇವಾ ಉತ್ಸವದ ಸ್ಮೃತಿಗಳು ಇಂದಿಗೂ ಜನಮನದಲ್ಲಿ ಜೀವಂತವಾಗಿವೆ. ಶ್ರೀ ಅನಂತಕುಮಾರ್ ಅವರ ಪ್ರೇರಣೆಯಿಂದ ನಡೆದ ಈ ಅದ್ವಿತೀಯ ಕಾರ್ಯಕ್ರಮದಲ್ಲಿ ಭಾರತದ ಅತ್ಯಾಧುನಿಕ ಕ್ಷಿಪಣಿಗಳು, ಯುದ್ಧ ವಿಮಾನಗಳು ಮತ್ತು ರಾಡಾರ್‌ಗಳು ಸಾರ್ವಜನಿಕರ ಗಮನ ಸೆಳೆದು ನಮ್ಮ ರಕ್ಷಣಾ ಸಾಮರ್ಥ್ಯವನ್ನು ಬಿಂಬಿಸಿದವು.**











